## 5

# ಯೇಸುವಿನ ಪೂರ್ವ ಸೂಚಕ

## (3:1-12)

ಸ್ನಾನಿಕನಾದ ಯೋಹಾನನು ಯೂದಾಯದ ಅರಣ್ಯದಲ್ಲಿ ಬೋಧಿಸುತ್ತಿದ್ದುದನ್ನು ಪ್ರಸ್ತಾಪಿಸುವುದರ ಮುಖಾಂತರ ಕ್ರಿಸ್ತನ ಬರೋಣದ ಸಿದ್ಧತೆಯ ಕುರಿತ ಅಂಶವನ್ನು ಮತ್ತಾಯನು ತೆರೆದಿಡುತ್ತಾನೆ. ಪ್ರವಾದಿಯಾದ ಮಲಾಕಿಯಿಂದ[1] ಸುಮಾರು ನಾಲ್ಕು ನೂರು ವರ್ಷಗಳ ನಿಶಬ್ದ ಕಾಲವನ್ನು ಸ್ನಾನಿಕನಾದ ಯೋಹಾನನ ಸೇವೆಯು ಮುರಿದು ಹಾಕಿದೆ. ಯೆಹೂದ್ಯ ಓದುಗರು ಯೋಹಾನನ ಕುರಿತು ಆಪ್ತಪರಿಚಯ ಹೊಂದಿದ್ದಾರೆಂದು ಮತ್ತಾಯನು ಭಾವಿಸಿದಿದ್ದರಿಂದ, ಪ್ರವಾದಿಯ ಹಿನ್ನಲೆಯನ್ನು ಆತನು ಸೇರಿಸಲಿಲ್ಲ. ಸ್ನಾನಿಕನಾದ ಯೋಹಾನನನ್ನು ಯೆಹೂದ್ಯರು ಚೆನ್ನಾಗಿ ತಿಳಿದುಕೊಂಡಿದ್ದಾರೆಂದು ಸುವಾರ್ತೆಯಲ್ಲಿ ಸ್ಥಾಪಿಸಲಾಗಿದೆ ಮತ್ತು ಯೆಹೂದ್ಯ ಇತಿಹಾಸಕಾರನಾದ Josephusನಿಂದ ದೃಢಪಡಿಸಲಾಗಿದೆ.[2]

ಯೋಹಾನನ ಪೂರ್ವಕಾಲ ಜೀವಿತದ ಕುರಿತು ಇತರ ಸವಾರ್ತೆಗಳಿಗಿಂತಲೂ ಹೆಚ್ಚಿನ ವಿವರಣೆಗಳನ್ನು ಲೂಕನು ಒದಗಿಸುತ್ತಾನೆ. ಯಾಜಕನಾದ ಜಕರೀಯನು ಯೋಹಾನನ ತಂದೆ, ಅಬೀಯನ ವರ್ಗದಲ್ಲಿ ಎಂಟನೆಯವನು (ಲೂಕ 1:5). ದಾವೀದ ರಾಜನು ಯಾಜಕತ್ವವನ್ನು ಇಪ್ಪತ್ತುನಾಲ್ಕು ವರ್ಗಗಳನ್ನಾಗಿ ನಿರ್ಮಿಸಿದನು (1 ಪೂರ್ವಕಾಲ ವೃತ್ತಾಂತ 24). ಪ್ರತಿಯೊಂದು ವರ್ಗ ವರ್ಷದಲ್ಲಿ ಎರಡು ವಾರಗಳು ದೇವಾಸ್ಥಾನದಲ್ಲಿ ಸೇವೆ ಸಲ್ಲಿಸ ಬೇಕು. ಇನ್ನು ಉಳಿದ ನಾಲ್ಕು ವಾರಗಳು ಯೆಹೂದ್ಯರ ಮುಖ್ಯ ಹಬ್ಬಗಳ ದಿನಗಳಾಗಿದ್ದು, ಅದರಲ್ಲಿ ಅನೇಕ ಯಾಜಕರು (ಎಲ್ಲರೂ ಇಲ್ಲದೆ ಇದ್ದರು) ಭಾಗವಹಿಸುತ್ತಾರೆ.

ಎಲಜಬೇತಳು, ಜಕರೀಯನ ಹೆಂಡತಿ, ಮಕ್ಕಳ ಹೆರುವ ವಯಸ್ಸನ್ನು ಕಳೆ ಯುವವರೆಗೆ ಅವಳು ಬಂಜೆಯಾಗಿದ್ದಳು (ಲೂಕ 1:7, 18). ಆಕೆಯೂ ಯೇಸುವಿನ ತಾಯಿಗೆ ಸಂಬಂಧಿಯಾಗಿದ್ದು (KJV), ಬಹುಶಃ ಚಿಕ್ಕಮ್ಮ ಆಗಿರಬಹದು (ಲೂಕ 1:36). **ಜಕರೀಯನು ದೇವಾಸ್ಥಾನದಲ್ಲಿ ಯಾಜಕ ಧರ್ಮವನ್ನು ನಡಿಸುತ್ತಿರುವಾಗ, ಕರ್ತನ ದೂತನಾದ ಗಬ್ರಿಯೇಲನು ಕಾಣಿಸಿಕೊಂಡು ನಿನ್ನ ಹೆಂಡತಿಯಾದ ಎಲಿಸಬೇತಳು ಒಬ್ಬ ಮಗುವನ್ನು ಹೆರುವಳು, ನೀನು ಅವನಿಗೆ "ಯೋಹಾನ" ನೆಂದು ಹೆಸರಿಡಬೇಕು ಎಂದು ಹೇಳಿದನು. ದೇವದೂತನು ಹೇಳಿರುವದಕ್ಕೆ ಜಕರೀಯನು ಅಪನಂಬಿಕೆ ತೋರಿಸಿದಾಗ ಆ ಸಮಯದಿಂದ ಮಗನು ಹುಟ್ಟುವ ದಿನದವರೆಗೂ ಮಾತಾನಾಡಲಾರದೆ ಮೂಕನಾಗಿದ್ದನು (ಲೂಕ 1:11-22, 59-64).**

ಯೋಹಾನನು ದೇವರ ಪ್ರತ್ಯೇಕವಾದ ಸೇವಕನಾಗಿರುವನು ಮತ್ತು ತಾಯಿಯ ಗರ್ಭದಲ್ಲಿರುವಾಗಲೇ ಪವಿಶುದ್ಧಾತ್ಮನಿಂದ ತುಂಬಿರುವನೆಂದು ಜಕರೀಯನಿಗೆ ಕರ್ತನ ದೂತನು ತಿಳಿಸಿದನು. ಆತನು ಇಸ್ರಾಯೇಲ್ಯರಲ್ಲಿ ಅನೇಕರನ್ನು ದೇವರ ಕಡೆಗೆ ತಿರುಗಿಸುವನು (ಲೂಕ 1:15, 16). ಯೋಹಾನನು ಮಧ್ಯವನ್ನಾಗಲೀ ದ್ರಾಕ್ಷಾರಸವನ್ನಾಗಲೀ ಕುಡಿಯದವನಾಗಿದ್ದರಿಂದ ಆತನು ನಜರೇತಿನವನೆಂದು ಅನೇಕರು ಊಹಿಸಿಕೊಂಡಾಗ್ಯೂ ಇನ್ನೂ ಇತರ ಅವಶ್ಯಕತೆಗಳನ್ನು ಅಲ್ಲಿ ಪ್ರಸ್ತಾಪಿಸಿಲ್ಲ (ಲೂಕ 1:15; ನೋಡಿರಿ ಅರಣ್ಯಕಾಂಡ 6). ಯೋಹಾನನು "ಎಲೀಯನ ಆತ್ಮ ಮತ್ತು ಬಲದಲ್ಲಿ" ಬರುವನೆಂದು ಸಹ ದೂತನು ಹೇಳಿದನು (ಲೂಕ 1:17). "ಭಯಂಕರವಾದ ಮಹಾದಿನವು ಬರುವದಕ್ಕೆ ಮುಂಚೆಯೇ" "ಪ್ರವಾದಿಯಾದ ಎಲೀಯನು" ಬರುವನೆಂದು ಪ್ರವಾದಿಯಾದ ಮಲಾಕಿ ಪ್ರವಾದಿಸಿದ್ದಾನೆ

(ಮಲಾಕಿ 4:5). ಯೋಹಾನನ ಜನನದ ನಂತರ, ಆತನು "ಕರ್ತನು ಮುಂದೆ ಹೋಗಿ ಆತನ ಹಾದಿಗಳನ್ನು ಸಿದ್ಧಮಾಡುವನೆಂದು" ಪ್ರವಾದಿಯಾದ ಜಕರೀಯನು ಪ್ರವಾದಿಸಿದ್ದಾನೆ (ಲೂಕ 1:76). ಆತನ ಹೇಳಿಕೆಯು ಮಲಾಕಿ 3:1ಕ್ಕೆ ಹತ್ತಿರವಾಗಿದೆ. ಅವನು ಮೊದಲು ಹೋಗಿ "ಜನರನ್ನು ದೇವರಿಗಾಗಿ ಸಿದ್ಧಮಾಡಿ ಅವರನ್ನು ಕರ್ತನಿಗೆ ಒದಗಿಸುವನು" ಎಂದು ದೂತನು ಹೇಳಿದನು (ಲೂಕ 1:17). ಬರತಕ್ಕ ಎಲೀಯನು ಇವನೇ ಆಗಿದ್ದನೆಂದು ತರುವಾಯ ಯೇಸು ಎಲೀಯನ ಕುರಿತು ಹೇಳಿದನು (11:10, 14; 17:11-13).

## ಸಿದ್ಧಮಾಡುವ ಸಂದೇಶ (3:1-4)

**[1]ಆ ದಿನಗಳಲ್ಲಿ ಸ್ನಾನಿಕನಾದ ಯೋಹಾನನು - [2]ಪರಲೋಕರಾಜ್ಯ ಸಮೀಪ ವಾಯಿತು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಯೂದಾಯದ ಅಡವಿಯಲ್ಲಿ ಸಾರಿ ಹೇಳುತ್ತಾ ಬಂದನು.**

**[3]ಕರ್ತನ ದಾರಿಯನ್ನು ಸಿದ್ಧ ಮಾಡಿರಿ;**
**ಆತನ ಹಾದಿಗಳನ್ನು ನೆಟ್ಟಗೆ ಮಾಡಿರಿ ಎಂದು**
**ಅಡವಿಯಲ್ಲಿ ಕೂಗುವವನ ಶಬ್ದವದೆ**
**ಎಂಬುದಾಗಿ ಪ್ರವಾದಿಯಾದ ಯೆಶಾಯನಿಂದ ಸೂಚಿತನಾದವನು ಇವನೇ.**
**[4]ಈ ಯೋಹಾನನಿಗೆ ಒಂಟೇ ಕೂದಲಿನ ಹೊದಿಕೆಯೂ ಸೊಂಟದಲ್ಲಿ ತೊಗಲಿನ ನಡುಕಟ್ಟೂ ಇದ್ದವು. ಅವನಿಗೆ ಮಿಡತೆ ಮತ್ತು ಕಾಡಜೇನು ಆಹಾರವಾಗಿದ್ದವು.**

**ವಚನ 1. ಆ ದಿನಗಳಲ್ಲಿ** ಎನ್ನುವ ವಾಕ್ಯಭಾಗವು ಜನನದ ಕುರಿತ (ಅಧ್ಯಾಯ 1; 2) ವೃತ್ತಾಂತವನ್ನು ಯೇಸುವಿನ ಸೇವೆಯ ಸಿದ್ಧತೆಯೊಂದಿಗೆ (ಅಧ್ಯಾಯ 3) ಜೋಡಿಸುತ್ತದೆ. ಅದು ಯೇಸು ನಜರೇತಿನಲ್ಲಿ ಜೀವಿಸುವ ಕಾಲವನ್ನು ಸಾಮಾನ್ಯವಾಗಿ ಸೂಚಿಸುವಂತದ್ದಾಗಿತ್ತು (2:23), ಆದಾಗ್ಯೂ ಅನೇಕರು ಇದನ್ನು ಕ್ರೈಸ್ತರ ಮಹಾ ಉದ್ಯಮ ಪ್ರಾರಂಭದ ಸೂಚನೆ ಎಂದು ವಿವರಿಸುತ್ತಾರೆ. ಹೆರೋದನು ಸತ್ತಂದಿನಿಂದ (ಕ್ರಿ.ಪೂ. 4) ಯೇಸುವಿನ ಕುಟುಂಬವು ಇಸ್ರಾಯೇಲಿಗೆ ಹಿಂತಿರುಗಿ ಬಂದು ನಜರೇತಿನಲ್ಲಿ ವಾಸವಾಗಿರಲು ಸುಮಾರು ಮೂವತ್ತು ವರ್ಷಗಳು ಕಳೆದುಹೋಗಿವೆ (2:23). **ಯೋಹಾನನ** ಸೇವೆಯ ಆರಂಭವು (ಕ್ರಿ.ಶ. 28ರಲ್ಲಿ) "ತಿಬೇರಿಯಾದ ಸೀಸೆರನ ಆಳ್ವಿಕೆಯ ಹದಿನೈದನೆಯ ವರ್ಷ" ಎಂದು ಲೂಕ 3:1 ಸ್ಪಷ್ಟವಾಗಿ ಸೂಚಿಸುತ್ತದೆ. ಯೇಸು ತನ್ನ ಮೂವತ್ತನೆಯ ವಯಸ್ಸಿನಲ್ಲಿ ಸೇವೆಯನ್ನು ಪ್ರಾರಂಭಮಾಡಿದನು (ಲೂಕ 3:23), ಮತ್ತು ಯೋಹಾನನು ಯೇಸುವಿಗಿಂತ ಆರು ತಿಂಗಳು ದೊಡ್ಡವನು (ಲೂಕ 1:36, 56, 57). ಆದುದರಿಂದ, ಯೋಹಾನನು ಸಹ ತನ್ನ ಸೇವೆ ಪ್ರಾರಂಭ ಮಾಡಿರುವಾಗ ಆತನು ಮೂವತ್ತು ವರ್ಷದವನಾಗಿದ್ದನು.

ಯೋಹಾನ ಅಥವಾ ಯೇಸುವಿನ ಬಾಲ್ಯದ ವಿಷಯ ಸುವಾರ್ತಾ ಬರಹಗಾರರು ಹೆಚ್ಚಾಗಿ ಬರೆದಿರುವುದಿಲ್ಲ (ನೋಡಿರಿ ಲೂಕ 1:80; 2:40-52). ಯೇಸುವಿನ ಸೇವೆ, ಆತನ ಮರಣ, ಸಮಾಧಿ, ಮತ್ತು ಪುನರುತ್ಥಾನದೊಂದಿಗೆ ಸಮಾಪ್ತಿಯಾಗುವದನ್ನು ಸುವಾರ್ತೆಗಳು ಹೆಚ್ಚಾಗಿ ಒತ್ತಿ ಹೇಳಿರುವುದೇ ಇದಕ್ಕೆ ಕಾರಣವಾಗಿದೆ. ಮೊದಲನೆಯ ಶತಮಾನದ ನಂತರ, ಯೇಸುವಿನ ಬಾಲ್ಯದ ಕುರಿತು ಕಲ್ಪನೆ ಕಥೆಗಳು ಹುಟ್ಟಿಕೊಂಡವು. Robert H. Mounce ರವರು ಹೀಗೆ ಬರೆದಿದ್ದಾರೆ, "ಸುದೈವದಿಂದ, ಪ್ರಮಾಣಿಕ ಸುವಾರ್ತೆಗಳು ಭಾವೋದ್ರೇಕ ಅಂಶಗಳು ಒಳಗೊಂಡಿರುವದಿಲ್ಲ. ನಿಸ್ಸಂದೇಹವಾಗಿ ಇತರ ಯೆಹೂದ್ಯ ಹುಡುಗನಂತೆ ಯೇಸು ಸಹ ಬೆಳೆದನು."[3]

ಮೃತ ಸಮುದ್ರ ಸುರುಳಿಗಳು ಸಿಕ್ಕ ಸ್ಥಳದಲ್ಲಿ ವಾಸಮಾಡುವ Qumran ಪಂಗಡಗಳ

ಮಧ್ಯೆ ಯೋಹಾನನು ಇದ್ದನೆಂದು ಇಂದು ಕೆಲವರು ಊಹಾಪೋಹ ಹೊಂದಿದ್ದಾರೆ. ಆತನ ವಯಸ್ಸಾದ ತಂದೆತಾಯಿಗಳು (ಲೂಕ 1:7) ಸತ್ತು ಹೋಗಿದ್ದರಿಂದ ಆ ಪಂಗಡದ ಜನರು ಆತನನ್ನು ನೋಡಿಕೊಂಡರೆಂದು, ಅಥವಾ ಯೋಹಾನನು ಯೌವ್ವನಸ್ಥನಾಗಿ ಆ ಪಂಗಡಕ್ಕೆ ಸೇರಿದನೆಂದು ಅವರು ಹೇಳುತ್ತಾರೆ. ಆದ್ದರಿಂದ, ಆತನ, ಅಭಿಪ್ರಾಯಗಳು ಎಸ್ಸೀನ್ಸ್ ಬೋಧನೆಗಳಿಂದ ರೂಪಗೊಂಡವೆಂದು ಅವರು ಹೇಳುತ್ತಾರೆ. ಇಂಥಹಾ ಸಿದ್ಧಾಂತವು ಹೊರಗಡೆ ತೋರಿಕೆಗೆ ಕಾಣಿಸಿಕೊಂಡರೂ, ಅದು ರುಜುವಾತು ಪಡಿಸಲು ಆಗುವದಿಲ್ಲ. "ಯೋಹಾನನು ಬೆಳೆದು ಆತ್ಮದಲ್ಲಿ ಬಲವುಳ್ಳವನಾದನು ಮತ್ತು ಇಸ್ರಾಯೇಲ್ ಜನರಿಗೆ ತನ್ನನ್ನು ತೋರ್ಪಡಿಸಿಕೊಳ್ಳುವ ದಿನದವರೆಗೆ ಅರಣ್ಯ ಪ್ರದೇಶಗಳಲ್ಲಿ ಇದ್ದನು" ಎಂದು ವಾಕ್ಯಭಾಗವು ಹೇಳುತ್ತದೆ (ಲೂಕ 1:80). ಅದು ಮಾತ್ರವಲ್ಲದೆ, ಆತನು ಪರಲೋಕದಿಂದ ಬಂದ ಸಂದೇಶ ವನ್ನು ಹೊಂದಿರುವ ಪ್ರವಾದಿಯಾಗಿದ್ದನು: "... ಜಕರಿಯನ ಮಗನಾದ ಯೋಹಾನನಿಗೆ ಅಡವಿಯಲ್ಲಿ ದೇವರ ವಾಕ್ಯವುಂಟಾಯಿತು" (ಲೂಕ 3:2).

ಯೋಹಾನನು **ಸ್ನಾನಿಕ** ಎಂದು ಅಥವಾ "ದೀಕ್ಷೆಕೊಡುವವನು" (*baptistēs*), ಎಂದು ಕರೆಯುತ್ತಿದ್ದರು ಯಾಕೆಂದರೆ ಆತನು ಅದನ್ನು ಮಾಡಿದ್ದನು: ಆತನು ಜನರಿಗೆ ದೀಕ್ಷಾಸ್ನಾನ ಮಾಡಿಸಿದನು (ನೋಡಿರಿ ವ್ಯಾಖ್ಯಾನ 3:6). ಮತ್ತಾಯನ ಸುವಾರ್ತೆ ಪ್ರಕಾರ **ಯುದಾಯದ ಅಡವಿಯಲ್ಲಿ ವಾಕ್ಯ ಸಾರುತ್ತಿದ್ದನು.** "ಸಾರುತ್ತಿರುವುದು" (*kērussō*), ಎನ್ನುವುದು ಶಬ್ದದಿಂದ ಬಂದಿದೆ, ಅದರ ಅರ್ಥ "ಪ್ರಚಾರ ಮಾಡು (ಸುದ್ದಿ ಕೊಡುವವ)." "ಸುದ್ದಿ ಕೊಡುವವನೆಂದರೆ" ಬಹಿರಂಗವಾಗಿ ಪ್ರಚಾರ, ಘೋಷಣೆ ಮಾಡುವವನು. "ಅಡವಿ" (*erēmos*) ಈ ಪದವು ಸಾಮಾನ್ಯವಾಗಿ ಅದು ಜನರು ವಾಸ ಮಾಡದ ಮತ್ತು ವ್ಯವಸಾಯ ಮಾಡದ ಭಂಜರು ಭೂಮಿಯೆಂದು ಸೂಚಿಸುತ್ತದೆ. ಯೆರೂಸಲೇಮ ಮತ್ತು ಮೃತ ಸಮುದ್ರ ಮಧ್ಯದಲ್ಲಿರುವ ಈ ಸ್ಥಳ ಇಂದು ಕಡಿಮೆ ಜನಸಾಂದ್ರತೆ ಕಲ್ಲು ಬಂಡೆಗಳಿಂದ ಕೂಡಿದ ನಿರುಪಯೋಗ ವಲಯವೆಂದು ಮತ್ತಾಯನು ಇದನ್ನು ಸೂಚಿಸಲು ಉಪಯೋಗಿಸಿದ್ದಾನೆ, ಈ ವಲಯದ ಕುರಿತು Jack P. Lewis ಹೀಗೆ ವಿವರಿಸಿದ್ದಾರೆ:

> ಯೂದಾಯದ ಅಡವಿಯು, ಎತ್ತರವಾದ ನೆಲದ ಕೇಂದ್ರದಿಂದ ಮೃತ ಸಮುದ್ರಕ್ಕೆ ಇಳಿಜಾರಾಗಿದೆ, ಅಲ್ಲಲ್ಲಿ ಸಿಗುವ ನೀರು ಮೆಡಿಟರೇನಿಯದಿಂದ ಹುಟ್ಟುವ ಮೋಡದ ಹನಿಗಳು ಈ ಪಶ್ಚಿಮ ಬೆಟ್ಟದ ತುದಿಯನ್ನು ಪಶ್ಚಿಮವಲಯದಲ್ಲಿರುವ ಪರ್ವತದ ಶ್ರೇಣಿಗಳನ್ನು ತಂಪು ಮಾಡುತ್ತವೆ. ಆ ಗುಡ್ಡವು, ಕಡಿದಾದ ಬಂಡೆಯ ಕಮರಿಯಿಂದ ಸೀಳಲ್ಪಟ್ಟಿದೆ, ಸಿಡುಬಿನ ಮಚ್ಚೆಕಲೆ ಇರುವ ಗವಿಗಳು, ದೊಡ್ಡ ಬಂಡೆಗಳು, ಹೊಂದಿಕೊಂಡಿವೆ, ಇದು ನಿರ್ಜನವಾದ ಖಾಲಿಸ್ಥಳವಾಗಿದ್ದು ಪೂರ್ವಶತಮಾನದಲ್ಲಿ Qumran ಪಂಗಡದಂತಹ ಸನ್ಯಾಸಿಗಳನ್ನು ಆಹ್ವಾನಿಸಿದಂತೆ ಇದೆ.[4]

ಯೋಹಾನನು ತನ್ನ ಸೇವೆಯನ್ನು ಅಡವಿಯಲ್ಲಿ ಪ್ರಾರಂಭ ಮಾಡಿದನು ಎನ್ನುವ ವಾಸ್ತವವು ವಿಶೇಷ ಅರ್ಥವುಳ್ಳದ್ದಾಗಿದೆ. ಮೆಸ್ಸೀಯನಿಂದ ದೇವ ಜನರ ವಿಮೋಚನೆ ಕಾರ್ಯವು ಪ್ರಾರಂಭವಾಗುವದೆಂದು ಸಾಮಾನ್ಯವಾಗಿ ನಿರೀಕ್ಷಿಸಲಾಗಿತ್ತು (ನೋಡಿರಿ 24:23-26; ಅಪೊಸ್ತಲರ ಕೃತ್ಯಗಳು 21:38).[5] ಯೋಹಾನನು ನಂತರ ಉತ್ತರ ಮತ್ತು ಪೂರ್ವ ಪ್ರದೇಶಗಳಲ್ಲಿ ವಾಕ್ಯವನ್ನು ಸಾರುತ್ತಾ, "ಯೊರ್ದನ್ ಹೊಳೆಯ ಆಚೇ ಕಡೆಯಲ್ಲಿರುವ ಬೇಥಾನ್ಯ" (ಯೋಹಾನ 1:28) ಮತ್ತು "ಸಲೀಮೂರಿನ ಹತ್ತಿರವಿರುವ ಐನೋನೆಂಬ" (ಯೋಹಾನ 3:23) ಪಟ್ಟಣದ ಹತ್ತಿರವಿರುವ ಯೋರ್ದನ ಹೊಳೆಯಲ್ಲಿ ದೀಕ್ಷಾಸ್ನಾನ ಮಾಡಿಸುತಿದ್ದನು.

**ವಚನ 2.** ಯೋಹಾನನು ಸಾರಿದ ಸಂದೇಶ ಸ್ಪಷ್ಟವಾಗಿತ್ತು, ಸರಳವಾಗಿತ್ತು, ಮತ್ತು ಅರ್ಥಮಾಡಿಕೊಳ್ಳಲು ಸುಲಭವಾಗಿತ್ತು: ಆತನು ಯೆಹೂದ್ಯರಿಗೆ **ಪಶ್ಚಾತ್ತಾಪಪಡಿರಿ** ಮತ್ತು

ದೇವರ ಕಡೆ ತಿರುಗಿಕೊಳ್ಳಿರಿ ಎಂದು ಸಾರಿ ಹೇಳಿದನು. ಅನ್ಯ ಜನರು ಪಶ್ಚಾತ್ತಾಪಪಡುವ ಅವಶ್ಯಕತೆಯಿದೆ ಎಂದು ಹೇಳುವುದರ ಮುಖಾಂತರ ಯೆಹೂದ್ಯ ಜನರನ್ನು ಆತನು ಆಶ್ಚರ್ಯಗೊಳಿಸಿದನು. ಈ ವಾಕ್ಯಭಾಗದಲ್ಲಿ "ಪಶ್ಚಾತ್ತಾಪಪಡಿರಿ" ಎಂದು ಉಪಯೋಗಿಸಿರುವ ಗ್ರೀಕ್ ಪದವು (*metanoeō*) ಸುಧಾರಣೆ ಜೀವಿತಕ್ಕೆ ನಡೆಸುವಂತ ಮನಸ್ಸಿನ ಬದಲಾವಣೆಯನ್ನು ಸೂಚಿಸುತ್ತದೆ. ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಿರುವ ಗ್ರೀಕ್ ಶಬ್ದವು "ಮನಸ್ಸನ್ನು ಬದಲಾಯಿಸು, ಉದ್ದೇಶ, ಪಾಪದಿಂದ ಪರಿಶುದ್ಧತೆಗೆ ಬರುವ"[6] ವಿಷಯಕ್ಕೆ ಸಂಬಂಧಿಸಿದೆ ಎಂದು John A. Broadus ಹೇಳಿದ್ದಾರೆ. ಯೆಹೂದ್ಯರನ್ನು ಪಶ್ಚಾತ್ತಾಪ ಪಡಿರಿ ಎಂದು ಹೇಳುವದರಿಂದ, ಯೋಹಾನನು ಹಳೆ ಒಡಂಬಡಿಕೆಯ ಪ್ರವಾದಿಗಳ ಹೇಳಿಕೆಯನ್ನು ಮತ್ತೆ ಪುನರುಚ್ಛರಿಸಿದ್ದಾನೆ (ಯೆಶಾಯ 55:7; ಯೆರೆಮೀಯ 15:19; ಯೆಹೆಜ್ಕೇಲ 33:11; ಹೊಶೆಯ 14:1, 2; ಯೋವೇಲ 2:12, 13; ಜೆಕರ್ಯ 1:3, 4; ಮಲಾಕಿ 3:7).

ಯೋಹಾನನು ಪಶ್ಚಾತ್ತಾಪಪಡುವ ಬೇಡಿಕೆಯ ಅತ್ಯಅವಸರತೆಯನ್ನು ಈ ಮಾತುಗಳಿಂದ ಬಲಪಡಿಸಿದನು: **ಪರಲೋಕರಾಜ್ಯ ಸಮೀಪವಾಯಿತು.** ಶತಮಾನಗಳಿಂದ ದೇವರಿಂದ ವಾಗ್ದಾನ ಮಾಡಲ್ಪಟ್ಟ ರಾಜ್ಯವು ಇನ್ನೂ ಬಂದಿರಲಿಲ್ಲ (ದಾನಿಯೇಲ 2:44; 7:13, 14), ಆದರೆ ಅದು ಪತ್ಯಕ್ಷವಾಗುವದು ಹತ್ತಿರವಾಗಿತ್ತು. ಪರಲೋಕ ರಾಜ್ಯಕ್ಕೆ ಪ್ರಜೆಗಳಾಗಲು ಇಚ್ಛಿಸುವವರು ತಮ್ಮ ಹೃದಯಗಳನ್ನು, ಮನಸ್ಸನ್ನು, ನಡತೆಯನ್ನು, ಮುಕ್ತ ಗುಣವನ್ನು, ಬದಲಾಯಿಸಿಕೊಳ್ಳಬೇಕೆಂದು ಯೋಹಾನನು ಜನರಿಗೆ ಹೇಳಿದನು. ಪಶ್ಚಾತ್ತಾಪ ಮತ್ತು ಪರಲೋಕ ರಾಜ್ಯ ಹತ್ತಿರವಾಗಿದೆ ಎಂಬ ಸಂದೇಶವು ಯೇಸುವಿನಿಂದ (4:17) ಮತ್ತು ಆತನ ಅಪೊಸ್ತಲರಿಂದ ಮುಂದುವರಿಸಲ್ಪಟ್ಟಿತ್ತು (10:7). Robert H. Gundry ಹೀಗೆ ಗಮನಿಸಿದ್ದಾರೆ, "ಮೂಲರೂಪವಾಗಿರುವ ಯೋಹಾನನು, ಉಪದೇಶಕನಾಗಿರುವ ಯೇಸು, ಹನ್ನೆರಡು ಜನ ಶಿಷ್ಯರು, ಎಲ್ಲರೂ ಸಹ ಅದೇ ಸಂದೇಶವನ್ನು[7] ಸಾರಿದರು."

"ಪರಲೋಕ ರಾಜ್ಯ" ಎನ್ನುವ ಪದವು ಮೊದಲನೆಯದಾಗಿ ಮತ್ತಾಯ 3:2ರ ವಾಕ್ಯಭಾಗದಲ್ಲಿ ಕಾಣಿಸುತ್ತದೆ. ಈ ವಾಕ್ಯಭಾಗವು ಮತ್ತಾಯನಿಗೆ ವಿಶೇಷವಾಗಿದೆ, ಇದನ್ನು ಮೂವತ್ತೆರಡು ಸಾರಿ ಉಪಯೋಗಿಸಿದನು.[8] ಬೇರೆ ಸುವಾರ್ತೆಯಲ್ಲಿ ಬದಲಾಗಿ "ದೇವರ ರಾಜ್ಯ"ವೆಂದು ಬರೆಯಲಾಗಿದೆ, ಯೆಹೂದ್ಯರ ರಚನೆಯ ಪುಸ್ತಕಗಳಲ್ಲಿ ಕೆಲವು ಸಾರಿ "ದೇವರು" ಎಂದು ಇರುವ ಸ್ಥಳದಲ್ಲಿ "ಪರಲೋಕ" ಎನ್ನುವ ಪದವನ್ನು ಉಪಯೋಗಿಸುವದರಿಂದ ನೇರವಾಗಿ ದೈವತ್ವವನ್ನು ಸೂಚಿಸುವದು ದೂರಮಾಡಲಾಗಿದೆ. ರಾಜ್ಯವು ಪರಲೋಕದಲ್ಲಿ ಪ್ರಾರಂಭವಾಗುತ್ತದೆ, ಮತ್ತು ಅದನ್ನು ಪರಲೋಕದಿಂದಲೇ ಆಳಲ್ಪಡುತ್ತದೆ. "ನನ್ನ ರಾಜ್ಯವು ಈ ಲೋಕದ್ದಲ್ಲ" ಎಂದು ಯೇಸು ಪಿಲಾತನಿಗೆ ಹೇಳಿದನು (ಯೋಹಾನ 18:36). ಪರಲೋಕದಲ್ಲಿರುವ ತನ್ನ ಸಿಂಹಾಸನದಿಂದ ದೇವರು ತನ್ನ ರಾಜ್ಯವನ್ನು ಇಂದು ಆಳುತ್ತಿದ್ದಾನೆ (ಅಪೊಸ್ತಲರ ಕೃತ್ಯಗಳು 2:32-36; 1 ಕೊರಿಂಥ 15:24).

ಮತ್ತಾಯ 16:18, 19ರಲ್ಲಿ ಯೇಸು ಮೊದಲೆ ಪ್ರವಾದಿಸಿದಂತೆಯೇ ಈ ರಾಜ್ಯವು ಭೂಮಿಯ ಮೇಲೆ ಸಭೆಯಾಗಿ ಕಾಣಿಸಿದೆ. ಪಂಚಾಶತ್ತಮ ದಿನದಂದು, ದೇವರ ರಾಜ್ಯದ ಮೇಲೆ ಕ್ರಿಸ್ತನ ಬಲ ಮತ್ತು ಆಡಳಿತದ ಕುರಿತ ಸಂದೇಶ ಕೇಳಿದವರು ದೀಕ್ಷಾಸ್ನಾನ ಮಾಡಿಸಿಕೊಂಡು ದೇವರ ರಾಜ್ಯಕ್ಕೆ ಸೇರಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 2:38, 47). ಇಂತವರನ್ನು "ಅಂಧಕಾರ ಧೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು" ಎಂದು ಪೌಲನು ಹೇಳಿದ್ದಾನೆ (ಕೊಲಸ್ಸೆ 1:13). ಅವರೆಲ್ಲರೂ "ಯಾರೂ ಕದಲಿಸಲಾರದ ರಾಜ್ಯವನ್ನು ಹೊಂದುವರು" ಎಂದು ತನ್ನ ಕ್ರೈಸ್ತ ಓದುಗರಿಗೆ ಇಬ್ರಿಯಾ ಬರಹಗಾರನು ತಿಳಿಸಿದ್ದಾನೆ (ಇಬ್ರಿಯ 12:28). ಅಪೊಸ್ತಲನಾದ ಯೋಹಾನನು ತನ್ನ ಜೊತೆ ಇರುವ ವಿಶ್ವಾಸಿಗಳಿಗೆ ಆತನು ಅವರ "ಸಹೋದರನೂ ಮತ್ತು ರಾಜ್ಯದಲ್ಲಿಯೂ … ಪಾಲುಗಾರನೂ … ಆಗಿರುವನೂ" ಎಂದು ಹೇಳಿದ್ದಾನೆ (ಪ್ರಕಟನೆ 1:9).

**ವಚನ 3.** ಕ್ರಿಸ್ತನ ಮೂನ್ ಸೂಚಕನಾಗಿ ಬರುವನೆಂದು ಪ್ರವಾದಿಯಾದ **ಯೆಶಾಯನ** ಪ್ರವಾದನೆಯನ್ನು ಸ್ನಾನಿಕನಾದ ಯೋಹಾನನು ನೆರವೇರಿಸಿದನೆಂದು ಮತ್ತಾಯನು ಪ್ರಕಟಿಸುತ್ತಾನೆ:

> **ಕರ್ತನ ದಾರಿಯನ್ನು ಸಿದ್ಧ ಮಾಡಿರಿ;**
> **ಆತನ ಹಾದಿಗಳನ್ನು ನೆಟ್ಟಗೆ ಮಾಡಿರಿ ಎಂದು**
> **ಅಡವಿಯಲ್ಲಿ ಕೂಗುವವನ ಶಬ್ದವದೆ**

ಮತ್ತಾಯನು ಹೇಳುವ ಯೆಶಾಯ 40:3ರ ಉಲ್ಲೇಖನವು ಸೆಪ್ಟೆಜೆಂಟ್ ಆಧಾರದಿಂದ ಕೊನೆಯ ಒಂದು ಸಾಲನ್ನು ಬಿಟ್ಟು, "ಕರ್ತನ ದಾರಿಯನ್ನು ಸಿದ್ಧಮಾಡಿರಿ" ಎಂಬುದರಿಂದ "ಆತನ ಹಾದಿಗಳನ್ನು ನೆಟ್ಟಗೆ ಮಾಡಿರಿ" ಎಂಬುದನ್ನು ತೆಗೆದುಕೊಳ್ಳಲಾಗಿದೆ. ಅದರ ನಿಮಿತ್ತ ವಾಗಿ "ಕರ್ತನು" ಎನ್ನುವ ಪದವು ಯೇಸುವಿಗೆ ಸರಳವಾಗಿ ಅನ್ವಹಿಸಲಾಗಿದೆ.

ಇದರ ಮೂಲ ಸಂದರ್ಭದಲ್ಲಿ, ಬಾಬೇಲ್ ಸೆರೆಯಿಂದ ಯೆರೂಸಲೇಮಿಗೆ[9] ತಿರುಗಿ ಬರುವವರನ್ನು ನಡಿಸುವ ದೇವರಿಗೆ ಮಾರ್ಗ ಸಿದ್ಧಪಡಿಸುವದನ್ನು ಯೆಶಾಯ 40:3 ಸೂಚಿಸುತ್ತದೆ - ರಾಷ್ಟ್ರೀಯ ಬಿಡುಗಡೆ ಮತ್ತು ಪುನಃ ಸ್ಥಾಪನೆಯ ವಿಷಯವನ್ನು ಸೂಚಿಸುತ್ತದೆ. ಹಾಗಿದ್ದರೂ, ದೇವರ ಜನರಿಗೆ ಆತ್ಮೀಕ ಬಿಡುಗಡೆ ಮತ್ತು ಅವರ ಪುನಃಸ್ಥಾಪಿಸುವಿಕೆ ಮಾಡುವ ಕ್ರಿಸ್ತನಿಗಾಗಿ ಮಾರ್ಗವನ್ನು ಯೋಹಾನನು ಸಿದ್ಧಪಡಿಸುವದರಲ್ಲಿ ಈ ಮಾತುಗಳು ಶ್ರೇಷ್ಠವಾಗಿ ನೆರವೇರುತ್ತವೆ.

"ನೆಟ್ಟಗೆ" ಮಾಡು ಎನ್ನುವ ಅಲಂಕಾರವು ಮತ್ತು ಸಿದ್ಧಮಾಡಿರಿ ಎನ್ನುವದು ಹಿಂದಿನ ಕಾಲದ ಕಾಡುಗಳಲ್ಲಿ ರಸ್ತೆಗಳು ಬಹಳವಾಗಿ ಕೆಟ್ಟ ಸ್ಥಿತಿಯಲ್ಲಿದ್ದವು ಎಂಬ ವಾಸ್ತವಿಕತೆಯ ಮೇಲೆ ಆಧಾರಗೊಂಡವು. Paul T. Butler ಹೀಗೆ ವಿವರಿಸಿದ್ದಾರೆ,

> ಈ ಕಾಡು ಪೊದೆಗಳಲ್ಲಿ, ಬೆಟ್ಟಗಳಲ್ಲಿ, ಕಣಿವೆಗಳಲ್ಲಿ, ಬಂಡೆಗಳೊಂದಿಗೆ ಇದ್ದ ಮತ್ತು ಕಾಡು ಪ್ರಾಣಿಗಳು ಭಯಂಕರವಾದ ಭಯವನ್ನು ಅಡಚಣೆಯನ್ನು ಹಿಂದಿನ ಕಾಲದಲ್ಲಿ ಪ್ರಯಾಣಿಸುವವರು ಎದುರಿಸುತ್ತಿದ್ದರು. ರಾಜರು ಮತ್ತು ಪರಾಕ್ರಮಿಗಳು ಈ ಸರಿಯಿಲ್ಲದ ಮಾರ್ಗದಲ್ಲಿ ಪ್ರಯಾಣ ಮಾಡಲು ಇಚ್ಛಿಸುವಾಗ, ಅಲ್ಲಿ ದೊಡ್ಡ ಗುಲಾಮರ ಗುಂಪು ಮತ್ತು ಕೆಲಸಗಾರರನ್ನು ಅವರು ಪ್ರಯಾಣಕ್ಕಿಂತ ಮೊದಲೆ ಕಳಿಸುತ್ತಿದ್ದರು ಕಣಿವೆಗಳನ್ನು, ತಗ್ಗುಗಳನ್ನು, ಬೆಟ್ಟಗಳನ್ನು ಕಡಿದು ಸಮತಲವಾದ ಮತ್ತು ಸುರಕ್ಷಿತವಾದ ರಸ್ತೆಗಳನ್ನು ಅವರು ಪ್ರಯಾಣಿಸಲು ಮಾಡುತ್ತಿದ್ದರು.[10]

ಪಶ್ಚಾತ್ತಾಪ ಮತ್ತು ದೇವರ ರಾಜ್ಯ ಹತ್ತಿರವಿದೆ ಎಂದು ಸಾರುವದರಿಂದ, ಯೋಹಾನನು ಬರಲಿಕ್ಕಿರುವ ರಾಜನಿಗಾಗಿ ಜನರ ಹೃದಯಗಳನ್ನು ಸಿದ್ಧಮಾಡುತ್ತಿದ್ದನು (ನೋಡಿರಿ ಮಾರ್ಕ 1:2, 3; ಲೂಕ 3:4-6; ಯೋಹಾನ 1:23). Lewis ಹೀಗೆ ಗಮನಿಸಿದ್ದಾರೆ, "ಆ ಸಮಯದಲ್ಲಿ ಕಾಡಿನಲ್ಲಿ ಇತರರು - Qumran ಸಮಾಜದವರು - 'ದಾರಿಗೆ' ಸಂಬಂಧಿಸಿ ತಮ್ಮ ಕುರಿತಾಗಿ ಮಾತಾಡಿದರು ಮತ್ತು ಸ್ವಲ್ಪ ಭಿನ್ನವಾದ ರೀತಿಯಲ್ಲಿ ಯೆಶಾಯ [40:3]ರಿಗೆ ಮನವಿಯನ್ನು ಮಾಡಿಕೊಂಡರು."[11] ಅವರ ಚಳುವಳಿಯು ಸತ್ತು ಹೋಯಿತ್ತು, ಆದರೆ ಯೋಹಾನನು ಎಂದಿಗೂ ಉಳಿಯುವ ಕ್ರಿಸ್ತನ ರಾಜ್ಯಕ್ಕಾಗಿ ಮಾರ್ಗವನ್ನು ಸಿದ್ಧಮಾಡಿದನು.

**ವಚನ 4. ಈ ಯೋಹಾನನಿಗೆ ಒಂಟೇ ಕೂದಲಿನ ಹೊದಿಕೆಯೂ ಸೊಂಟದಲ್ಲಿ ತೊಗಲಿನ ನಡುಕಟ್ಟೂ ಇದ್ದವು.** ಆತನು ಧರಿಸಿರುವ ವಸ್ತ್ರ ನೋಡಿದಾಗ ಅದು ಗಂಭೀರವಾದ ದೃಷ್ಯವಾಗಿದೆ! ಈ ವರ್ಣನೆಯು ಆತನು ವಾಸಮಾಡುವ ಅರಣ್ಯಕ್ಕೂ ಮತ್ತು ಸಾಮಾನ್ಯವಾಗಿರುವ ಆತನ ಉಪದೇಶಕ್ಕೂ ಸರಿಹೊಂದುವಂತದ್ದಾಗಿತ್ತು. ಯೋಹಾನ ಜೀವಿತ

ನಿಸ್ವಾರ್ಥ ಮತ್ತು ತ್ಯಾಗದಿಂದ ಕೂಡಿತ್ತು. ಯೇಸು ಈತನನ್ನು "ನಯವಾದ ಉಡುಪನ್ನು" ಉಟ್ಟುಕೊಂಡವರು "ಅರಮನೆಗಳಲ್ಲಿ ಇರುತ್ತಾರೆ" ಎಂದು ಹೋಲಿಸಿ ಅವರ ಮಧ್ಯೆದ ಭಿನ್ನತೆಯನ್ನು ಹೇಳಿದನು (11:8).[12] ಒಡ್ಡೊಡ್ಡಾದ ಆತನ ಉಡುಪು ಮತ್ತು ಆತನ ಕಾಣಿಸುವಿಕೆ ಹಿಂದಿನ ಕಾಲದ ಪ್ರವಾದಿಗಳನ್ನು ನೆನಪಿಸುವದರಲ್ಲಿ ನಿಸ್ಸಂದೇಹವಾಗಿದೆ (ಜೆಕರ್ಯ 13:4) - ಬಹುಶಃ ಪ್ರತ್ಯೇಕಿಸಿ ಎಲೀಯನನ್ನು (2 ಅರಸುಗಳು 1:8; ನೋಡಿರಿ ಮಲಾಕಿ 3:1; 4:5; ಮತ್ತಾಯ 11:14; 17:10-13). ಆತನ ಕುರಿತಾಗಿ ಏನು ಆಲೋಚಿಸಬೇಕೆಂದು ಯೆಹೂದ್ಯರಿಗೆ ತಿಳಿದಿರಲಿಲ್ಲ, ಆದರೆ ಆತನು ಒಬ್ಬ ಪ್ರವಾದಿಯಾಗಿದ್ದಾನೆಂದು ಅವರಿಗೆ ಗೊತ್ತಿತ್ತು (11:9; 21:26).

ಯೋಹಾನನ **ಮಿಡತೆ** ಮತ್ತು **ಕಾಡು ಜೇನು** ಆಹಾರವು ಆತನ ಅಡವಿ ಪ್ರಾಂತದ ಜೀವಿತಕ್ಕೆ ಸರಿಯಾಗಿರುವಂತದ್ದಾಗಿದೆ, ಆದರೆ ಜನಭರಿತ ಪ್ರಾಂತಗಳಲ್ಲಿರುವವರಿಗೆ ಇದು ಅಸಾಧಾರಣವಾದುದ್ದಾಗಿ ಕಾಣಿಸುತ್ತದೆ. ಯೋಹಾನನು ನಿಜವಾಗಿಯೂ ನಜರೇತಿನವನಾಗಿದ್ದಾನೆಂದು ಅಂದುಕೊಂಡು ಈ ರೀತಿಯಾಗಿ Gundry ವ್ಯಾಖ್ಯಾನಿಸಿದ್ದಾರೆ, "ಮಿಡತೆಗಳು ಮತ್ತು ಕಾಡು ಜೇನು ಅರಣ್ಯದಲ್ಲಿರುವವರಿಗೆ ಯುಕ್ತವಾದ ಆಹಾರವೆಂದು ಸೂಚಿಸುವುದು ಮಾತ್ರವಲ್ಲದೆ, ಆದರೆ ರಕ್ತವಿಲ್ಲದ ಮಾಂಸ ರಹಿತ (ಇದರಿಂದ ಮಿಡತೆಗಳು) ಮತ್ತು ದ್ರಾಕ್ಷರಸವಿಲ್ಲದ (ಇದರಿಂದ ಕಾಡುಜೇನು) ಪರಿಶುದ್ಧವಾದ ಆಹಾರವನ್ನು ತೆಗೆದುಕೊಂಡರು."[13] ಯೋಹಾನನ ಆಹಾರ ಪದ್ಧತಿಗಳು ಅವನು ದೆವ್ವ ಹಿಡಿದವನಾಗಿದ್ದಾನೆಂದು ತಪ್ಪಾಗಿ ಆರೋಪಿಸಲಿಕ್ಕೆ ನಡೆಸಿತು (11:18).

ಜೇನು ಹುಳು ಸಾಕುವವರಿಂದ ಮಾರಲ್ಪಡುವ ಜೇನು, ಕಾಡಿನಲ್ಲಿ "ಕಾಡು ಜೇನು ಹುಳುಗಳಿಂದ ಉತ್ಪತ್ತಿಯಾಗುವ ಜೇನು ಬೇರೆಯಾಗಿರುತ್ತದೆ."[14] ಇಂತಹ ಜೇನು ಸತ್ಯವೇದದ ಆ ಕಾಲದಲ್ಲಿ ಸಾಮಾನ್ಯವಾಗಿತ್ತು (ಧರ್ಮೋಪದೇಶಕಾಂಡ 32:13; ನ್ಯಾಯಸ್ಥಾಪಕ 14:8, 9, 18; 1 ಸಮುವೇಲ 14:25, 26, 29; ಕೀರ್ತನೆ 81:16). ಮಿಡತೆಗಳನ್ನು ತಿನ್ನುವ ವಿಚಾರ ಕೇಳಿದಾಗ ನಮ್ಮ ಹೊಟ್ಟೆಯಲ್ಲಿ ಕಲಿಸಿದಂತೆ ಆಗಬಹುದು, ಆದರೆ ದೇವರು ಸ್ಪಷ್ಟವಾಗಿ ಇಸ್ರಾಯೇಲರಿಗೆ ಅದನ್ನು ತಿನ್ನಲು ಅವಕಾಶಮಾಡಿ ಪ್ರೋತ್ಸಾಹ ಮಾಡಿದ್ದಾನೆ (ಯಾಜಕಕಾಂಡ 11:22). ಅವರ ಈ ಆಹಾರ ಸಿದ್ಧತೆಗೆ ಸಂಬಂಧಸಿದಂತೆ H. Leo Boles ಹೀಗೆ ಹೇಳಿದ್ದಾರೆ,

> ಅವರು ಮಿಡತೆಗಳು ಸಿಕ್ಕ ಮೇಲೆ ಅವುಗಳನ್ನು ಎಣ್ಣೆಯಲ್ಲಿ ಕರಿದು ಮತ್ತು ಕೆಲವು ಸಾರಿ ಕುದಿಸಿ ಅಥವಾ ಅದಕ್ಕೆ ಉಪ್ಪು ಹಚ್ಚಿ ಇಡುತ್ತಿದ್ದರು, ಮತ್ತು ಎಲ್ಲಾ ಪೂರ್ವ ದೇಶಗಳಲ್ಲಿ ಬಡತನದಲ್ಲಿರುವ ಜನರು ಅವುಗಳು ದೊರಕುವ ಸ್ಥಳಗಳಲ್ಲಿ ತಿನ್ನುತ್ತಿದ್ದರು. ಕೆಲವು ಸಾರಿ ಸೂರ್ಯನ ಬಿಸಿಲಿಗೆ ಒಣಗಿಸಿ ಈ ಮಿಡತೆಗಳು ಸಿಗುವ ಕಾಲ ಹೋದಮೇಲೆ ಅವುಗಳನ್ನು ತಿನ್ನಲು ಉಪಯೋಗಿಸುತ್ತಿದ್ದರು. ಆಹಾರವನ್ನು ಸಿದ್ಧಮಾಡುವ ಮೊದಲು ತಲೆಗಳು, ಕಾಲುಗಳು, ಮತ್ತು ರೆಕ್ಕೆಗಳನ್ನು ತೆಗೆಯುವರು; ತಾಜತನವಾಗಿರುವ ಮತ್ತು ಒಣಗಿರುವವುಗಳನ್ನು ತಿನ್ನುತ್ತಿದ್ದರು.[15]

ಇಂದು ಸಹ ಪೂರ್ವ ದೇಶಗಳ ಜನರು ಮಿಡತೆಗಳನ್ನು ಆಹಾರವಾಗಿ ಮತ್ತು ರುಚಿಯಾದ ಪದಾರ್ಥವಾಗಿ ಉಪಯೋಗಿಸುತ್ತಿದ್ದಾರೆ.

## ಸಿದ್ಧಮಾಡುವ ದೀಕ್ಷಾಸ್ನಾನ (3:5, 6)

**5ಆಗ ಯೆರೂಸಲೇಮೂ ಎಲ್ಲಾ ಯೂದಾಯವೂ ಯೊರ್ದನ್ ಹೊಳೆಯ ಸುತ್ತಲಿರುವ**
**ಎಲ್ಲಾ ಸೀಮೆಯೂ 6ಅವನ ಬಳಿಗೆ ಹೊರಟುಹೋಗಿ, ಅವರು ತಮ್ಮತಮ್ಮ ಪಾಪಗಳನ್ನು ಹೇಳಿ**

**ಕೊಂಡು ಯೊರ್ದನಹೊಳೆಯಲ್ಲಿ ಅವನಿಂದ ದೀಕ್ಷಾಸ್ನಾನಮಾಡಿಸಿಕೊಳ್ಳುತ್ತಿದ್ದರು.**

**ವಚನ 5.** ಹೆಚ್ಚಾಗಿ ಪ್ರವಾದಿಗಳು ಪಟ್ಟಣಗಳಿಗೆ, ಊರುಗಳಿಗೆ, ಹಳ್ಳಿಗಳಿಗೆ ಹೋಗುವರು ಆದರೆ ಜನರು ಕಾಡಿನಲ್ಲಿರುವ ಪ್ರವಾದಿಯಾದ ಯೋಹಾನನು ಇರುವ ಸ್ಥಳಕ್ಕೆ ಹೋಗುತ್ತಿದ್ದರು, ಯೋಹಾನನು ಯೊರ್ದಾನ ಹೊಳೆಯಲ್ಲಿ ದೀಕ್ಷಾಸ್ನಾನ ಮಾಡಿಸುತ್ತಿದ್ದನು, ಮತ್ತು ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಸಾಮಾನ್ಯ ಜನರು ಗುಂಪು ಗುಂಪಾಗಿ ಬರುತ್ತಿದ್ದರು. **ಆಗ ಯೆರೂಸಲೇಮೂ ಎಲ್ಲಾ ಯೂದಾಯವೂ ಯೊರ್ದನ್‌ಹೊಳೆಯ ಸುತ್ತಲಿರುವ ಎಲ್ಲಾ ಸೀಮೆಯೂ** ಬಂದರೆಂದು ಮತ್ತಾಯನು ಬರೆದಿದ್ದಾನೆ. "ಎಲ್ಲಾ" ಎನ್ನುವ ಶಬ್ದವು ಅತಿಶಯೋಕ್ತಿಯಾಗಿ ಇಲ್ಲಿ ಉಪಯೋಗಿಸಲಾಗಿದೆ. ನಿಶ್ಚಯವಾಗಿ ಆ ಸ್ಥಳಗಳಿಂದ ಜನರು ಗುಂಪು ಗುಂಪಾಗಿ *ಎಲ್ಲಾ* ಜನರು ಆತನಿಂದ ಕೇಳಿಸಿಕೊಳ್ಳಲು ಹೋಗುತ್ತಿರಲಿಲ್ಲ. ಆದರೆ, ಈ ಸ್ಥಳಗಳಿಂದ ಬಂದಿರುವ ಜನರಲ್ಲಿ ಹೆಚ್ಚಾಗಿ ಕೇಳಿಸಿಕೊಳ್ಳಲು ಬಂದವರಾಗಿದ್ದರು. ತನ್ನ ವಿರುದ್ಧವಾಗಿ ದಂಗೆ ಏಳುವಷ್ಟರಮಟ್ಟಿಗೆ ಯೋಹಾನನು ಜನರ ಮಧ್ಯದಲ್ಲಿ ಪ್ರಸಿದ್ಧಿಯಾಗಿದ್ದದ್ದು Herod Antipasನಿಗೆ ಭಯವನ್ನುಂಟು ಮಾಡಿತೆಂದು ಇತಿಹಾಸಕಾರ Josephus ಹೇಳಿದ್ದಾನೆ.[16]

**ವಚನ 6.** ಯೋಹಾನನ ಬಳಿಗೆ ಕೇಳಿಸಿಕೊಳ್ಳಲು ಬಂದ ಅನೇಕರು ಆತನಿಂದ **ದೀಕ್ಷಾಸ್ನಾನ ಮಾಡಿಸಿಕೊಂಡರು.** "ದೀಕ್ಷಾಸ್ನಾನ" (*baptizō*) ಎಂಬ ಅರ್ಥಕೊಡುವ ಗ್ರೀಕ್ ಶಬ್ದದಕ್ಕೆ "ಮುಣುಗು, ತೋಯಿಸು, ತೊಳೆ"[17] ಎಂದು ಅರ್ಥವಾಗಿದೆ. ಯೋಹಾನನು "ದೀಕ್ಷಾಸ್ನಾನ" ಮಾಡಿಸುವಾಗ, ಅವರನ್ನು ನೀರಿನಲ್ಲಿ ಮುಣುಗಿಸಿದನು (ನೋಡಿರಿ ಯೋಹಾನ 3:23). ಕ್ರೈಸ್ತರ ದೀಕ್ಷಾಸ್ನಾನವು ಸಹ ನೀರಿನಲ್ಲಿ ಮುಣುಗುವದೇ ಆಗಿದೆ, ಪಶ್ಚಾತ್ತಾಪಪಟ್ಟ ವಿಶ್ವಾಸಿಗಳು ಕ್ರಿಸ್ತನೊಂದಿಗೆ "ಸಮಾಧಿ" ಮಾಡಲ್ಪಡುವರು (ರೋಮಾಪುರ 6:4; ಕೊಲಸ್ಸೆ 2:12). "ಚೆಲ್ಲು" ಮತ್ತು "ಚಿಮುಕಿಸು" ಎಂಬ ಗ್ರೀಕ್ ಶಬ್ದಗಳು ಇವೆ ಆದರೆ ಈ ಪದಗಳನ್ನು ದೀಕ್ಷಾಸ್ನಾನಕ್ಕಾಗಿ ಹೊಸ ಒಡಂಬಡಿಕೆಯಲ್ಲಿ ಎಲ್ಲಿಯೂ ಉಪಯೋಗಿಸಿರುವುದಿಲ್ಲ.

ನೀರಿನಲ್ಲಿ ಮುಳುಗುವ ಆಚರಣೆಯು ಪ್ರಾಚೀನಕಾಲದ ಒಂದು ಧಾರ್ಮಿಕ ಆಚರಣೆಯಾಗಿರುವುದು ಸಾಮಾನ್ಯವಾಗಿತ್ತು. ಆದರೂ ಸಹ ಇದಕ್ಕೆ ಇಲ್ಲಿ *ಬೇರೆ ಅರ್ಥವು* ಸೇರಿಸಿದ್ದಾರೆ. David S. Dockery ಹೀಗೆ ಹೇಳಿದ್ದಾರೆ,

> ಸಂಬಂಧಿಸಿದ ಉದಾಹರಣೆಗಳಲ್ಲಿ ಗಂಗಾನದಿಯಲ್ಲಿ ಹೊಂದುವ ಸಂಸ್ಕಾರ ವಿಧಾನ, ಬಾಬೇಲ್ ದೇಶದಲ್ಲಿ ಯಂಕಿ ಅನ್ನುವ ಅನ್ಯರ ಆಚರಣೆಯ ಶುದ್ಧಿಕರಣ, ಮತ್ತು ಐಗುಪ್ತದಲ್ಲಿ ಆಗ ತಾನೇ ಹುಟ್ಟಿದ ಮಕ್ಕಳ ಶುದ್ಧಿಕರಣ ಮತ್ತು ಸತ್ತವರ ಮೇಲೆ ಆಚರಿಸುವ ಪುನಶ್ಚೇತನಗೊಳಿಸುವ ಸಂಸ್ಕಾರದ ಪದ್ಧತಿಗಳು ಒಳಗೊಂಡಿದ್ದವು. *ದೀಕ್ಷಾಸ್ನಾನ baptizō*, ಮತ್ತು ಸಂಬಂಧಿಸಿದ ಪದಗಳನ್ನು, ಕ್ರೇಟನ್ ಧರ್ಮ, ತ್ರೇಸಿಯನ್ ಮತಧರ್ಮ, ಯಲ್ಯೋಸಿನಿಯನ್ ಮಾರ್ಮಿಕ ಧರ್ಮ, ಅನೇಕ ಜ್ಞಾನತತ್ವವಾದ ಗುಂಪುಗಳು, ಮತ್ತು ಅನ್ಯರು, ತಮ್ಮ ಸಂಸ್ಕಾರ ಪದ್ಧತಿಗಳನ್ನು ಮಾಡುವಾಗ ಉಪಯೋಗಿಸುತ್ತಿದ್ದರು.[18]

ಹಾಗಿದ್ದರೂ, ಯೆಹೂದ್ಯ ಮತಾಚರಣೆಯಲ್ಲಿ (ಮಾರ್ಕ 7:3, 4; ಇಬ್ರಿಯ 6:2; 9:10), ಯೋಹಾನನ ದೀಕ್ಷಾಸ್ನಾನಕ್ಕೆ ತುಂಬಾ ಹತ್ತಿರವಾದ ಸಂಬಂಧ ಹೊಂದಿರುತ್ತವೆ. ಒಬ್ಬನು ಆಚರಣೆ ಕಾರ್ಯಕ್ಕೆ ಸಂಬಂಧ ಪಟ್ಟಂತೆ ಶುದ್ಧತೆ ಹೊಂದಿದವವನಾಗಿರಬೇಕಾದರೆ ಧರ್ಮಶಾಸ್ತ್ರ ಪ್ರಕಾರವಾಗಿ ಅವನು ತೊಳೆದುಕೊಳ್ಳುವುದು ಅವಶ್ಯಕವಾಗಿದೆ (ಯಾಜಕಕಾಂಡ 15). Mishnah ಬರಹಗಳಲ್ಲಿ ಒಂದು ಸಂಪೂರ್ಣ ಭಾಗವು ಈ ಅಂಶಕ್ಕೆ ಮೀಸಲಾಯಿತು.[19] ಅಷ್ಟು ಮಾತ್ರವಲ್ಲದೆ, ಯೆಹೂದ್ಯರ ಸಂಸ್ಕಾರ ಸ್ನಾನಕ್ಕೆ ***(miqwa' oth)*** ಸಂಬಂಧಿಸಿದ ಅನೇಕ ಪುರಾತತ್ವ ಶಾಸ್ತ್ರ ಸಂಬಂಧದ ಉದಾಹರಣೆಗಳು ಮೊದಲನೆಯ

ಶತಮಾನಕ್ಕೆ ಹತ್ತಿರವಾಗಿದ್ದು, ಇಸ್ರಾಯೇಲನಲ್ಲಿ ಇಂದಿಗೂ ಸಹ ಇದೆ. ಅಂಥಹ ಆಚರಣೆಗಳು ಧಾರ್ಮಿಕ ಸಂಸ್ಕರಣ ಪದ್ಧತಿ ವಿಶೇಷವಾಗಿ Qumran ಸಮಾಜದಲ್ಲಿದ್ದವು. ಆ ಸಮಾಜವು ಪಶ್ಚಾತ್ತಾಪ ಮತ್ತು ಒಂದು ಹೊಸ ಯುಗದ[20] ಕುರಿತು ಒತ್ತಿ ಹೇಳುತ್ತದೆ. ಅಷ್ಟು ಮಾತ್ರವಲ್ಲದೆ, ಕಾಲಾನುಕ್ರಮದ ಕುರಿತು ಚರ್ಚೆಗಳು ನಡೆಯುತ್ತಿರುವಾಗ, ಮೊದಲನೆ ಶತಮಾನದಲ್ಲಿ ಅನ್ಯಜನರು ಯೆಹೂದ್ಯ ಮತಾವಲಂಭಿಗಳಾಗಲು ತಮ್ಮನ್ನು ತಾವೇ ನೀರಿನಲ್ಲಿ ಮುಳುಗುವದು - ಹಾಗೆಯೇ ಸುನ್ನತಿ ಹೊಂದುವುದು ಮತ್ತು ತ್ಯಾಗ ಬಲಿದಾನಗಳನ್ನು ಅರ್ಪಿಸುವುದು ಅವಶ್ಯಕತೆಯೆಂದು ಅನೇಕರು ನಂಬಿದರು.[21]

ಧರ್ಮಶಾಸ್ತ್ರದ ಶುದ್ಧತೆಯ ಸಂಸ್ಕಾರ, ಮತ್ತು ಸಂಪ್ರದಾಯಿಕ ಮತಾಂತರದವರ ದೀಕ್ಷಾಸ್ನಾನವು ಯೋಹಾನನ ದೀಕ್ಷಾಸ್ನಾನವನ್ನು ಹಿನ್ನಡೆಯುವಂತೆ ಮಾಡಿದವು, ಅಲ್ಲಿ ಅನೇಕ ವ್ಯತ್ಯಾಸಗಳು ಇದ್ದವು. (1) ಯೋಹಾನನ ದೀಕ್ಷಾಸ್ನಾನವು ಅದು ಪ್ರವಾದಿಯಿಂದ ನಿರ್ವಹಿಸಲ್ಪಟ್ಟಿತು, ಆದರೆ, ಶುದ್ಧತೆಯ ಸಂಸ್ಕಾರ ಸ್ನಾನವು ಮತ್ತು ಅನ್ಯ ಮತಾವಲಂಭಿಗಳ ದೀಕ್ಷಾಸ್ನಾನವು ಅವರಿಗೆ ಅವರೇ ನಿರ್ವಹಿಸಿಕೊಳ್ಳುತ್ತಿದ್ದರು. (2) ಧರ್ಮಶಾಸ್ತ್ರ ಪ್ರಕಾರದ ಸ್ನಾನವು ಹೆಚ್ಚಾಗಿ ಸಂಸ್ಕಾರ ಶುದ್ಧಿಗೆ ಒತ್ತುಕೊಡಲಾಗಿತ್ತು. ಆದರೆ ಯೋಹಾನನು ಕೊಟ್ಟಿರುವ ದೀಕ್ಷಾಸ್ನಾನದಲ್ಲಿ ಪಶ್ಚಾತ್ತಾಪ ಮತ್ತು ಕ್ಷಮಾಪಣೆಗೆ ಒತ್ತು ಕೊಡಲಾಗುತ್ತದೆ. (3) ಧರ್ಮಶಾಸ್ತ್ರ ಪ್ರಕಾರದ ಸಂಸ್ಕಾರ ಸ್ನಾನವು ಅನೇಕ ಬಾರಿ ಪುನರಾವರ್ತನೆ ಆಗುತ್ತಿತ್ತು ಆದರೆ ಯೋಹಾನನ ದೀಕ್ಷಾಸ್ನಾನವು ಒಂದೇ ಸಾರಿಮಾಡುವ ಕಾರ್ಯವಾಗಿತ್ತು. (4) ಯೆಹೂದ್ಯ ಮತವನ್ನು ಸೇರಿಕೊಳ್ಳಲು ಅನ್ಯರಿಗಾಗಿ ದೀಕ್ಷಾಸ್ನಾನವು ಕೊಡಲ್ಪಡುತ್ತಿತ್ತು. ಆದರೆ ಯೋಹಾನನ ದೀಕ್ಷಾಸ್ನಾನವು ಮುಂದೆ ಬರುವ ದೇವರ ರಾಜ್ಯಕ್ಕಾಗಿ ಸಿದ್ಧಗೊಳ್ಳಲು ಕೊಡಲ್ಪಟ್ಟಿತು. ಆದಾಗ್ಯೂ, ಯೆಹೂದ್ಯ ಮತದಲ್ಲಿ ಬೇರು ಆಳವಾಗಿ ಬಿಟ್ಟರೂ, ಯೋಹಾನನ ದೀಕ್ಷಾಸ್ನಾನಕ್ಕೆ ಮತ್ತು ಅದರ ಆಚರಣೆಗೆ ಸ್ಪಷ್ಟವಾದ ವ್ಯತ್ಯಾಸವಿದೆ. "ನೀರಿನಲ್ಲಿ ದೀಕ್ಷಾಸ್ನಾನ ಕೊಡಲು ನನ್ನನ್ನು ಕಳುಹಿಸಿದಾತನು" ದೇವರೆಂದು ಯೋಹಾನನು ಸಾಕ್ಷಿಕೊಟ್ಟಿದ್ದಾನೆ (ಯೋಹಾನ 1:33). ಯೋಹಾನನ ದೀಕ್ಷಾಸ್ನಾನಕ್ಕೆ ಪರಲೋಕದಿಂದ ಅಧಿಕಾರ ಕೊಡಲ್ಪಟ್ಟಿತು ಎಂದು ಯೇಸು ಸ್ಪಷ್ಟವಾಗಿ ಸೂಚಿಸಿದ್ದಾನೆ (ನೋಡಿರಿ 21:23-27).

ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ಯೋಹಾನನ ಹತ್ತಿರ ಬಂದ ಜನರಿಗೆ ದೀಕ್ಷಾಸ್ನಾನ ಕೊಟ್ಟನು. ಯಾಕೆಂದರೆ ಪಾಪ ಕ್ಷಮಾಪಣೆ ಹುಡುಕುವವನಿಗೆ ಪಶ್ಚಾತ್ತಾಪ ಪಡುವ ಅವಶ್ಯಕತೆ ಇದೆಯೆಂದು ಪ್ರವಾದಿಯು ಹೇಳಿದನು (ನೋಡಿರಿ ಎಜ್ರನು 9:6-15; ಕೀರ್ತನೆ 51:1-4; ದಾನೀಯೇಲ 9:4-11). J. W. McGarvey ರವರು ಹೀಗೆ ಸಲಹೆಕೊಟ್ಟಿದ್ದಾರೆ, "ಪಾಪವನ್ನು ಒಪ್ಪಿಕೊಳ್ಳುವುದು ಸಾಮಾನ್ಯ ಸ್ವಭಾವವುಳ್ಳದ್ದಾಗಿತ್ತು; ಯೋಹಾನನ ಸೇವೆ ಸ್ವಲ್ಪ ಕಾಲದವರೆಗಿತ್ತು, ಮತ್ತು ಪ್ರತಿ ವ್ಯಕ್ತಿಯು ಎಲ್ಲಾ ಪಾಪಗಳನ್ನು ವಿವರವಾಗಿ ಒಪ್ಪಿಕೊಳ್ಳುವದರ ಭಾವನೆಯನ್ನು ಆತನಿಂದ ದೀಕ್ಷಾಸ್ನಾನ ಹೊಂದಿದ ಅನೇಕರು ನಿಷೇದಿಸಿದರು."[22]

ಯೋಹಾನನು ಪಶ್ಚಾತ್ತಾಪಗೊಂಡ ಯೆಹೂದ್ಯರಿಗೆ **ಯೊರ್ದನ್ ಹೊಳೆಯಲ್ಲಿ** ದೀಕ್ಷಾಸ್ನಾನ ಮಾಡಿಸಿದನು. Lewis ರವರು ಯೊರ್ದನ್ ಕುರಿತು ಈ ರೀತಿಯಲ್ಲಿ ವರ್ಣಿಸಿದ್ದಾರೆ:

> ಗಲಿಲಾಯ ಸಮುದ್ರದಿಂದ ಇಳಿಜಾರಾಗಿ ಮೃತ ಸಮುದ್ರದವರೆಗೆ ಯೊರ್ದಾನ್ ನದಿಯು ವಿಮಾನಯಾನದ ದೂರ ಸುಮಾರು ಅರವತ್ತೈದು ಮೈಲುಗಳು ಹೊಂದಿದೆ, ಯೋರ್ದಾನಿನ ಮೇಲೆ ಬೀಸುವ ಗಾಳಿಯು ಎರಡುನೂರು ಮೈಲಿಗಳಷ್ಟು ದೂರ ಹೋಗುತ್ತದೆ. ದೀಕ್ಷಾಸ್ನಾನಕ್ಕಾಗಿ ದಾರಳವಾದ ನೀರು ಇದೆ. ಅದು ಯೆರಿಕೋವಿಗೆ ಪೂರ್ವದಿಕ್ಕಿನಲ್ಲಿ ತೊಂಬತ್ತು ಅಡಿ ಅಗಲ ಮತ್ತು ಮೂರರಿಂದ ಹನ್ನೆರಡು ಅಡಿ ಆಳ ಇರುತ್ತದೆ. ಆಳದಿಂದ ಕೂಡಿದ ಜಾಗ ಹೊರತುಪಡಿಸಿ ಈ ನದಿ ದಾಟಲು ದೋಣಿಗಳು ಬೇಕು.[23]

## ಸಿದ್ಧಮಾಡುವ ಪಶ್ಚಾತ್ತಾಪ (3:7-12)

**7ಆದರೆ ಅವನು ಫರಿಸಾಯರಲ್ಲಿಯೂ ಸದ್ದುಕಾಯರಲ್ಲಿಯೂ ಅನೇಕರು ತನ್ನಿಂದ ಸ್ನಾನ ಮಾಡಿಸಿಕೊಳ್ಳುವದಕ್ಕೆ ಬರುವದನ್ನು ಕಂಡು ಅವರಿಗೆ - ಎಲೈ ಸರ್ಪಜಾತಿಯವರೇ, ಮುಂದೆ ಕಾಣಬರುವ ದೈವಕೋಪದಿಂದ ತಪ್ಪಿಸಿಕೊಳ್ಳುವದಕ್ಕೆ ನಿಮಗೆ ಉಪದೇಶ ಮಾಡಿದವರಾರು? 8ಹಾಗಾದರೆ ನಿಮ್ಮ ಮನಸ್ಸು ದೇವರ ಕಡೆಗೆ ತಿರುಗಿತೆಂಬದನ್ನು ತಕ್ಕ ಫಲದಿಂದ ತೋರಿಸಿರಿ. 9ಅಬ್ರಾಹಾಮನು ನಮಗೆ ಮೂಲಪುರುಷನಲ್ಲವೇ ಎಂಬುವ ಆಲೋಚನೆಯನ್ನು ಬಿಡಿರಿ. ದೇವರು ಅಬ್ರಾಹಾಮನಿಗೆ ಈ ಕಲ್ಲುಗಳಿಂದಲೂ ಮಕ್ಕಳನ್ನು ಹುಟ್ಟಿಸಬಲ್ಲನೆಂದು ನಿಮಗೆ ಹೇಳುತ್ತೇನೆ. 10ಈಗಲೇ ಮರಗಳ ಬೇರಿಗೆ ಕೊಡಲಿ ಹಾಕಿದೆ; ಒಳ್ಳೇ ಫಲವನ್ನು ಕೊಡದ ಪ್ರತಿಯೊಂದು ಮರವನ್ನು ಕಡಿದು ಬೆಂಕಿಯಲ್ಲಿ ಹಾಕುವರು. 11ನಾನಂತೂ ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬುದಕ್ಕೆ ನಿಮಗೆ ನೀರಿನಲ್ಲಿ ಸ್ನಾನ ಮಾಡಿಸುತ್ತೇನೆ. ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು; ಆತನ ಕೆರಗಳನ್ನು ಹೊರಲಿಕ್ಕೂ ನಾನು ಯೋಗ್ಯನಲ್ಲ; ಆತನು ಪವಿತ್ರಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನಮಾಡಿಸುವನು. 12ಆತನು ಮೊರವನ್ನು ಕೈಯಲ್ಲಿ ಹಿಡಿದಿದ್ದಾನೆ; ತನ್ನ ಕಣದಲ್ಲಿಯ ರಾಶಿಯನ್ನು ತೂರಿ ಹಸನುಮಾಡಿ ತನ್ನ ಗೋದಿಯನ್ನು ಕಣಜದಲ್ಲಿ ತುಂಬಿಕೊಂಡು ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟು ಬಿಡುವನು ಎಂದು ಹೇಳಿದನು.**

**ವಚನ 7.** ಯೆಹೂದ್ಯ ನಾಯಕರು ಯೋಹಾನನ ಮಾತುಗಳನ್ನು ಕೇಳಲು ಜಿಜ್ಞಾಸೆಯಿಂದ ಹೋದರು. ಅದರಲ್ಲಿ **ಫರಿಸಾಯರ** ಪ್ರತಿನಿಧಿಗಳಿದ್ದರು. ಈ ಪಕ್ಷಕ್ಕೆ ಸೇರಿದವರು Hasideans Maccabeanರ ದಂಗೆಯಿಂದ ಈ ಗುಂಪು ಉದ್ಭವಿಸಿದರೆಂದು ಸರ್ವಸಾಮಾನ್ಯವಾಗಿ ನಂಬಲಾಗಿದೆ.[24] ಆ ಕಾಲದಲ್ಲಿ Seleucids ರವರಿಂದ ಯೆಹೂದ್ಯರ ಮೇಲೆ ಒತ್ತಾಯ ಮಾಡಿದ ಗ್ರೀಕ್ ಸಂಸ್ಕೃತಿಯನ್ನು ಅವರು ನಿರಾಕರಿಸಿದರು. ಧರ್ಮಶಾಸ್ತ್ರವನ್ನು ಉಲ್ಲಂಗಿಸದೆ ಇರುವಂತೆ, ಸ್ವಲ್ಪ ಕಾಲದ ತರುವಾಯ ಫರಿಸಾಯರು ಧರ್ಮಶಾಸ್ತ್ರವನ್ನು ಕಾಪಾಡುವ ಬೇಲಿಯಂತೆ ಸಂಪ್ರದಾಯಕ್ಕೆ ಸಂಬಂಧಿಸಿದ ಒಂದು ಜಟಿಲವಾದ ಸಂವಿಧಾನವನ್ನು ಅಭಿವೃದ್ಧಿಪಡಿಸಿಕೊಂಡರು.[25] ದೈವಶಾಸ್ತ್ರ ಸಂರಕ್ಷಕರಾಗಿ, ಅವರು ದೇವದೂತರಲ್ಲಿ, ಆತ್ಮಗಳ ಇರುವಿಕೆಯಲ್ಲಿ ಮತ್ತು ಸತ್ತವರು ಬದುಕುವರು ಎಂಬದರ ಬಗ್ಗೆ ಗಟ್ಟಿಯಾಗಿ ನಂಬುತ್ತಿದ್ದರು (ಅಪೊಸ್ತಲರ ಕೃತ್ಯಗಳು 23:8). ಯೆಹೂದ್ಯರಲ್ಲಿ ತಮ್ಮಷ್ಟಕ್ಕೆ ತಾವು ಕಠಿಣ ಪಂಗಡದವರೆಂದು ಅವರು ತಿಳಿದುಕೊಂಡಿದ್ದರು (ಅಪೊಸ್ತಲರ ಕೃತ್ಯಗಳು 22:3; 26:5; ಫಿಲಿಪ್ಪಿ 3:5). "ಫರಿಸಾಯರು" ಎಂದರೆ "ಪ್ರತ್ಯೇಕಿಸಲ್ಪಟ್ಟವರು" ಎಂದರ್ಥ. ಯಾಕೆಂದರೆ, ಧರ್ಮಶಾಸ್ತ್ರದ ಕುರಿತು ತಿಳುವಳಿಕೆಯಿಲ್ಲದವರೆಂದು ಅವರಿಂದ ಪರಿಗಣಿಸಲ್ಪಟ್ಟ ಸಾಮಾನ್ಯ ಜನರಿಂದ ತಮ್ಮನ್ನು ತಾವೇ ಪ್ರತ್ಯೇಕಿಸಿಕೊಂಡಿದ್ದರು (ಯೋಹಾನ 7:47-49). ಸಭಾಮಂದಿರವು ಯೆಹೂದ್ಯರ ಮೇಲೆ ಪ್ರಭಾವ ಬೀರಿರುವದಕ್ಕೆ ಅವರ ಮುಖ್ಯ ಕ್ಷೇತ್ರವಾಗಿದೆ (ಯೋಹಾನ 9:13, 22). Josephus ರವರ ಪ್ರಕಾರ ಫರಿಸಾಯರ ಸಂಖ್ಯೆ ಸುಮಾರು ಆರು ಸಾವಿರವಾಗಿತ್ತು.[26]

**ಸದ್ದುಕಾಯರ** ಗುಂಪಿನ ಸದಸ್ಯರು ಯೋಹಾನನ್ನು ನೋಡಲು ಹೋಗಿದ್ದರು. ಈ ಗುಂಪಿಗೆ ಸೇರಿದವರು ಯಾಜಕರು ಮತ್ತು ಶ್ರೀಮಂತ ವ್ಯಕ್ತಿಗಳು ಆಗಿದ್ದರು. ಸೊಲೊಮೋನ ರಾಜನ ಅವಧಿಯಲ್ಲಿ ಮಹಾಯಾಜಕನಾಗಿದ್ದ ಚಾದೋಕ್‌ನಿಂದ ಈ ಹೆಸರು ತೆಗೆದುಕೊಳ್ಳಲಾಗಿದೆ (1 ಅರಸುಗಳು 2:35). ಫರಿಸಾಯರಂತೆಯೇ ಸದ್ದುಕಾಯರ ಪಕ್ಷವು Maccabean ಅವಧಿಯಲ್ಲಿ ಬೆಳೆಯಿತು. ಅವರ ಜೀವನ ಶೈಲಿಯು ಹದ್ದು ಮೀರಿರುವ ಜೀವನವಾಗಿತ್ತು ಮತ್ತು ರೋಮನ್ನರ ಜೊತೆ ಅವರಿಗೆ ಸಹಕಾರ ಸಂಬಂಧವಿತ್ತು. ಅವರು ತಮ್ಮ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳುತ್ತಾ, ಅವರ ಅಧಿಕಾರವನ್ನು ಮತ್ತು ಹಕ್ಕುಗಳನ್ನು ಹಿಡಿದಿಟ್ಟುಕೊಂಡಿದ್ದರು.

ಸದ್ದುಕಾಯರು ದೇವದೂತರನ್ನು, ಆತ್ಮಗಳನ್ನು, ಪುನರುತ್ಥಾನವನ್ನು ಅಥವಾ ಬಹುಮಾನ ಮತ್ತು ಶಿಕ್ಷೆಯನ್ನು ಅವರು ನಂಬುತ್ತಿರಲಿಲ್ಲ (22:23; ಅಪೊಸ್ತಲರ ಕೃತ್ಯಗಳು 23:8).[27] ಅಷ್ಟು ಮಾತ್ರವಲ್ಲದೆ, ಫರಿಸಾಯರು ಮೌಖಿಕ ಸಂಪ್ರದಾಯಗಳನ್ನು ನಿರಾಕರಿಸಿದರು.[28] ಸದ್ದುಕಾಯರು ಯಾಜಕರಾಗಿದ್ದರಿಂದ, ಯೆರೂಸಲೇಮಿನ ದೇವಾಲಯವು ಅವರು ಪ್ರಭಾವ ಬೀರುವ ಕ್ಷೇತ್ರವಾಗಿತ್ತು. ಫರಿಸಾಯರು ಮತ್ತು ಸದ್ದುಕಾಯರು ಇವರಿಬ್ಬರು ಸಹ ಯೆಹೂದ್ಯರ ಸನ್ಹೇದ್ರಿನ್ ಮಹಾಸಭೆಯಲ್ಲಿ ಪ್ರತಿನಿಧಿಸುತ್ತಿದ್ದರು.

ಯೋಹಾನನು ಯಾರಾಗಿದ್ದಾನೆ ಮತ್ತು ಇದನ್ನು ಮಾಡಲು ಆತನಿಗೆ ಈ ಅಧಿಕಾರ ಯಾರು ಕೊಟ್ಟರು ಎಂಬುದರ ಬಗ್ಗೆ ಯೋಹಾನನ ಹತ್ತಿರ ಬಂದ ಯೆಹೂದ್ಯ ನಾಯಕರು ತಿಳಿದುಕೊಳ್ಳಬೇಕೆಂದಿದ್ದರು (ಯೋಹಾನ 1:19-28). ಆತನ **ದೀಕ್ಷಾಸ್ನಾನವು** ಮುಂದೆ ಬರುವ ರಾಜ್ಯದ ಸದಸ್ಯರಾಗುವದಕ್ಕೆ ಪ್ರಮುಖವಾಗಿದೆಯೆಂದು ಅವರಲ್ಲಿ ಕೆಲವರು ಅರಿತುಕೊಂಡಿದ್ದರು. ಮತ್ತು ಅವರು ಆತನಿಂದ ದೀಕ್ಷಾಸ್ನಾನ ತೆಗೆದುಕೊಳ್ಳಲು ಬಯಸಿದರು. ಅವರ ಕಪಟಾಚರಣೆ ಯೋಹಾನನು ತಿಳಿದುಕೊಂಡಿದ್ದರಿಂದ ಅವರನ್ನು ನೋಡಿ ಕೋಪಗೊಂಡನು. ಅವರನ್ನು **ಸರ್ಪಜಾತಿಯವರೇ,** ಎಂದು ಕರೆದನು ಮತ್ತು ಅವರಿಗೆ **ಮುಂದೆ ಕಾಣಬರುವ ದೈವಕೋಪದಿಂದ ತಪ್ಪಿಸಿಕೊಳ್ಳುವದಕ್ಕೆ ನಿಮಗೆ ಉಪದೇಶ ಮಾಡಿದವರಾರು?** ಎಂದು ಪ್ರಶ್ನಿಸಿದನು. ಬೆಂಕಿಯ ಕಾವಿನಿಂದ ಹಾವು ಹೊರಗೆ ಬಂದಂತೆ (ನೋಡಿರಿ ಅಪೊಸ್ತಲರ ಕೃತ್ಯಗಳು 28:3), ಕೇವಲ ಭೌತಿಕ ದೀಕ್ಷಾಸ್ನಾನ ಮುಖಾಂತರ ಮುಂದೆ ಬರುವ ನ್ಯಾಯ ತೀರ್ಪನ್ನು ತಪ್ಪಿಸಿಕೊಳ್ಳಲು ಈ ಯೆಹೂದ್ಯ ನಾಯಕರು ಸಹಜವಾಗಿ ಆಲೋಚಿಸಿದರು.

ಯೋಹಾನನ ಬೋಧನೆ ಮತ್ತು ಯೇಸುವಿನ ಬೋಧನೆಯ ಮಧ್ಯೆ ಇನ್ನೊಂದು ಸಮಾನಾಂತರವನ್ನು ಮತ್ತಾಯನು 3:7 ಕೊಡುತ್ತದೆ. "ಎಲೈ ಸರ್ಪಜಾತಿಯವರೇ" ಎಂಬ ಪದವನ್ನು ಆತನನ್ನು ವಿರೋಧಿಸಿದ ಮೋಸವುಳ್ಳ ಮತ್ತು ಭ್ರಷ್ಟರಾಗಿದ್ದ ಫರಿಸಾಯರ ಜೀವಿತವನ್ನು ತೋರಿಸಲು ಯೇಸುವಿನಿಂದ ತರುವಾಯ ಉಪಯೋಗಿಸಲಾಗಿದೆ (12:34). ಯೋಹಾನನು ಕೇಳಿದಂತೆ ಯೇಸು ಪ್ರಶ್ನೆ ಕೇಳಿದನು: ಹಾವುಗಳೇ, ಸರ್ಪಜಾತಿಯವರೇ, ನರಕ ದಂಡನೆಗೆ ಹೇಗೆ ತಪ್ಪಿಸಿಕೊಂಡಿರಿ? (23:33).

**ವಚನ 8.** ಫರಿಸಾಯರಿಗೆ ಮತ್ತು ಸದ್ದುಕಾಯರಿಗೆ ಬೇಕಾಗಿರುವದು ಹೆಚ್ಚಾಗಿಯಿದೆ ಎಂದು ಯೋಹಾನನು ಹೇಳಿದನು. **ನಿಮ್ಮ ಮನಸ್ಸು ದೇವರ ಕಡೆಗೆ ತಿರುಗಿತೆಂಬುದನ್ನು ತಕ್ಕ ಫಲದಿಂದ ತೋರಿಸ** ಬೇಕಾಗಿತ್ತು. ಆತನು ಅವರಿಗೆ ದೀಕ್ಷಾಸ್ನಾನ ಕೊಡುವ ಮೊದಲು, ಅವರು ಪಶ್ಚಾತ್ತಾಪ ಹೊಂದಿದ್ದೇವೆಂದು ಪುರಾವೆ ತೋರಿಸುವ ಅವಶ್ಯಕತೆ ಇತ್ತು. "ಫಲ" ಎನ್ನುವದು ನಮ್ಮ ನಡತೆಯನ್ನು ತೋರಿಸುವಂಥದ್ದಾಗಿದೆ (7:20; 12:33; 21:43). ನಿಜವಾದ ಪಶ್ಚಾತ್ತಾಪಕ್ಕೆ ಜೀವನ ಸುಧಾರಣೆ ಸಂಪೂರ್ಣವಾಗಿ ಅವಶ್ಯಕವಾಗಿದೆ (ಅಪೊಸ್ತಲರ ಕೃತ್ಯಗಳು 26:20). ಸುಂಕದವರಿಗೆ ಮತ್ತು ಸೈನಿಕರಂತಹವರಿಗೆ ಯೋಹಾನನ ಸಲಹೆ ಸೂಚನೆಗಳು ಈ ವಾಸ್ತವಿಕತೆಯನ್ನು ವಿವರಿಸುತ್ತದೆ (ಲೂಕ 3:10-14).

**ವಚನ 9.** ಯೆಹೂದ್ಯ ನಾಯಕರು ತಮ್ಮ ರಕ್ಷಣೆಗಾಗಿ ದೇಶದ ಅಥವಾ ಕುಟುಂಬ ಮೂಲದ ಮೇಲೆ ಆತುಕೊಳ್ಳಬಾರದೆಂದು ಯೋಹಾನನು ಒತ್ತಿ ಹೇಳಿದ್ದಾನೆ. ಕೇವಲ ಭೌತಿಕವಾಗಿ **ಅಬ್ರಹಾಮನ** ಸಂತಾನವಾಗಿರುವದರಿಂದ ಅವರು ದೇವರ ಅನುಗ್ರಹಕ್ಕೆ ಪಾತ್ರರಾಗುವರೆಂದು ಲೆಕ್ಕಿಸುವ ಅವಕಾಶ ಇನ್ನಿಲ್ಲವೆಂದು ಹೇಳುವ ಸಮಯ ಕೂಡಿಬಂದಿದೆ. ವಾಸ್ತವವಾಗಿ ಅದು ಆ ರೀತಿಯಲ್ಲಿ ಮಾಡಲು ಆಗುವುದಿಲ್ಲ; ಅವರು ವಂಶಾವಳಿಯ ಕಾರಣದಿಂದ ದೇವರು ನಮ್ಮನ್ನು ಸ್ವೀಕರಿಸುತ್ತಾನೆಂದು ಅವರು ಅಂದ್ದುಕೊಂಡದ್ದೆಲ್ಲವು ಕೇವಲ ಊಹೆಯಾಗಿತ್ತು (ಯೋಹಾನ 8:31-59; ರೋಮಾಪುರ 2:1-29; 4:1-25). Mounce ರವರು ಹೀಗೆ ವಿವರಿಸಿದ್ದಾರೆ, "ಅಬ್ರಹಾಮನು ತನ್ನ ವಂಶಸ್ಥರೆಲ್ಲರನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರ ಎಲ್ಲಾ ಅವಶ್ಯಕತೆಗಳಿಗೆ ಸಾಕಾಗುವಷ್ಟು ಅನುಗ್ರಹ ಐಶ್ವರ್ಯವನ್ನು ಇಟ್ಟಿಕೊಂಡಿರುವಂತ

ಸದ್ಭಕ್ತನೆಂದು ಅರಬ್ಬಿಯರು ಅಬ್ರಹಾಮನ ಕುರಿತು ಬೋಧಿಸುತ್ತಿದ್ದರು (cf. *Mekilta Exod.* 14:15)."[29] ಒಂದು ಪ್ರಾಚೀನ ಯೆಹೂದ್ಯ ಮೂಲದ ಪ್ರಕಾರ, "ಇನ್ನು ಮೇಲೆ (ಮರಣ ಹೊಂದಿದ ಮೇಲೆ) ಅಬ್ರಾಹಾಮನು ನರಕದ ಬಾಗಿಲ ಹತ್ತಿರ ಕುಳಿತು ಕೊಂಡಿರುತ್ತಾನೆ, ಮತ್ತು ಸುನ್ನತಿ ಇರುವ ಯಾವ ಇಸ್ರಾಯೇಲನನ್ನು ಅಲ್ಲಿ ಒಳಕ್ಕೆ ಬಿಡನು."[30]

**ದೇವರು ಅಬ್ರಾಹಾಮನಿಗೆ ಈ ಕಲ್ಲುಗಳಿಂದಲೂ ಮಕ್ಕಳನ್ನು ಹುಟ್ಟಿಸಬಲ್ಲನೆಂದು ನಿಮಗೆ ಹೇಳುತ್ತೇನೆ.** Donald A Hagner ಹೀಗೆ ಗಮನಿಸಿದ್ದಾರೆ, "ಯೋಹಾನನ ಹೇಳಿಕೆ ಶಬ್ದ ಚಮತ್ಕಾರಗಳಿಂದ ಕೂಡಿದೆ ಎಂದು ಕಾಣಿಸುತ್ತದೆ, ಯಾಕೆಂದರೆ ಅರೆಮಿಯಾ ಭಾಷೆಯಲ್ಲಿ (ಇಬ್ರಿಯ ಭಾಷೆಯಲ್ಲಿಯೂ ಸಹ) 'ಮಕ್ಕಳು' (*bĕnayyā*') ಎಂಬುದಾಗಿ ಉಪಯೋಗಿಸಿರುವ ಪದವು ('*abnayyā*') 'ಕಲ್ಲಿಗೆ' ಉಪಯೋಗಿಸಿರುವ ಪದದಂತಿದೆ."[31] ಯೋಹಾನನು ತನ್ನ ಉಪದೇಶದಲ್ಲಿ ತನ್ನ ದೃಷ್ಯ ಸಾಧನವಾಗಿ ಉಪಯೋಗಿಸುವದಕ್ಕಾಗಿ ಅರಣ್ಯದಲ್ಲಿ ಇಂಥಹ ಕಲ್ಲುಗಳು (ನೋಡಲಿ 4:3) ಬಹಳಷ್ಟಿದ್ದವು; "ಇವುಗಳು" ಎನ್ನುವ ಸರ್ವನಾಮ ಆತನ ಹತ್ತಿರವಿರುವ ಕಲ್ಲುಗಳನ್ನು ಸೂಚಿಸುತ್ತದೆ. ಯೆಹೂದ್ಯರು "ಬಂಡೆ" ಯಿಂದ "ಕೆತ್ತಲ್ಪಟ್ಟವರು" ಎಂದು ಹೇಳುವಾಗ ಅವರು ತಂದೆಯಾದ ಅಬ್ರಾಹಾಮನ ವಂಶದವರೆ ಆಗಿದ್ದರು **(ಯೆಶಾಯ 51:1, 2).** ಆದಾಗ್ಯೂ, ದೇವರು ಅಬ್ರಾಹಾಮನಿಗೆ ಆತ್ಮೀಕ ಫಲಕೊಡಲು ಅವರ ಮೇಲೆ ಆತುಕೊಳ್ಳಲಿಲ್ಲ. Leon Morris ಹೀಗೆ ಬರೆದಿದ್ದಾರೆ, "ಭವಿಷ್ಯತ್ತಿನ ಯಾವುದೇ ನಿರೀಕ್ಷಣೆಯ ವಾಗ್ದಾನವಿಲ್ಲದವರಿಂದ ಪ್ರತ್ಯೇಕ ಅರ್ಹತೆವುಳ್ಳ ಜನರನ್ನು ಯಾವುದೇ ಸಮಯದಲ್ಲಿ ಎಬ್ಬಿಸುವದು ದೇವರ ಅಧಿಕಾರ ಅಧೀನದಲ್ಲಿದೆ ಎಂದು ಯೋಹಾನನು ಅವರಿಗೆ ತಿಳಿಸಿ ಹೇಳಿದ್ದಾನೆ."[32] ಯೋಹಾನನ ಈ ಹೇಳಿಕೆ ನೋಡುವಾಗ ಅನ್ಯರ ವಿಷಯವನ್ನು ಒಳಗೊಂಡಂತೆ ಕಾಣಿಸುತ್ತದೆ (ನೋಡಿರಿ 8:11, 12; ಗಲಾತ್ಯ 3:26-29).

**ವಚನ 10.** ಯೋಹಾನನು ಫಲದ ಕುರಿತ (3:8) ಅಲಂಕಾರಿಕವನ್ನು ಫಲ ಕೊಡುವ ಮರಕ್ಕೆ ಅನ್ವಯಿಸಿ ವಿಸ್ತರಿಸಿ ಹೇಳಿದ್ದಾನೆ. ದೇವರ ನೀತಿಯ **ಕೊಡಲಿ ಈಗಲೇ ಮರಗಳ ಬೇರಿಗೆ ಹಾಕಿದೆ,** ಮತ್ತು ಒಳ್ಳೆ ಫಲವನ್ನು ಕೊಡದ ಪ್ರತಿಯೊಂದು **ಮರವನ್ನು ಕಡಿದು ಬೆಂಕಿಯಲ್ಲಿ ಹಾಕುವರು.** ಹಳೆ ಒಡಂಬಡಿಕೆಯಲ್ಲಿ ಅಡವಿಯ ಮರಗಳನ್ನು ಕಡಿದು ಹಾಕುವ ಅಲಂಕಾರಿಕ ಪ್ರತಿಮೆ ಜನರ ಅಂತ್ಯವು ಹತ್ತಿರವಾಗಿದೆ ಎಂಬುದನ್ನು ಚಿತ್ರಿಕರಿಸುವಂತದ್ದಾಗಿದೆ (ಯೆಶಾಯ 10:33, 34; ಯೆರೆಮೀಯಾ 46:22). ದೇವರ ನ್ಯಾಯ ತೀರ್ಪು ಕ್ರಿ.ಶ. 70ರಲ್ಲಿ ರೋಮಾ ಸೈನ್ಯದವರಿಂದ ನಡೆದದನ್ನು ಯೋಹಾನನ ಪ್ರಸ್ತಾವನೆ ಸೂಚಿಸುತ್ತದೆಂದು ಸಲಹೆ ಕೊಡಲಾಗಿದೆ. ಹಾಗಿದ್ದರೂ, ಈ ವಚನವನ್ನು ಹಿಂಬಾಲಿಸಿ ಉಪಯೋಗಿಸಿರುವ ಬೆಂಕಿ ಮತ್ತು ನಾಶನ ಕುರಿತ ಭಾಷಾ ಪ್ರಯೋಗವು ಅಂತ್ಯ ದಿನದ ತೀರ್ಪಿನಂದು ಅವಿಧೇಯತೆಯುಳ್ಳವರಿಗೆ ಆಗುವ ನಾಶನವನ್ನು ಸೂಚಿಸಿದಂತೆ ಕಾಣಿಸುತ್ತದೆ. ಮತ್ತೊಂದಾವರ್ತಿ, ಯೋಹಾನನಿಂದ ಹೇಳಲ್ಪಟ್ಟಿರುವ ಮಾತುಗಳು ಮತ್ತೆ ಯೇಸುವಿನ ಉಪದೇಶಗಳಲ್ಲಿ ಪ್ರತಿಧ್ವನಿಸಲ್ಪಟ್ಟವು (7:19; ನೋಡಿರಿ ಯೋಹಾನ 15:2, 6).

**ವಚನ 11.** ಆತನು ಜನರಿಗೆ **ನೀರಿನಲ್ಲಿ ಸ್ನಾನ** ಮಾಡಿಸುತ್ತೇನೆಂದು ಯೋಹಾನನು ಹೇಳಿದನು. ಈ ವಚನದಲ್ಲಿ "ಅದರೊಂದಿಗೆ" ಎಂದು NASBಯಲ್ಲಿ ಅನುವಾದಿಸಿರುವ ವಿಭಕ್ತಿ ಪ್ರತ್ಯೇಯ ಅನೇಕ ಅರ್ಥಕೊಡುತ್ತದೆ. "ದೀಕ್ಷಾಸ್ನಾನ" ಕೊಡುವ ಎಂಬ ಕ್ರಿಯಾ ಪದವು "ಸಂಪೂರ್ಣ ಮುಳುಗಿಸು" ಎಂಬ ಅರ್ಥ ಕೊಡುವುದರಿಂದ (ನೋಡಿರಿ ವ್ಯಾಖ್ಯಾನ 3:6), ವಿಭಕ್ತಿ ಪ್ರತ್ಯೇಯದಲ್ಲಿ "ಒಳಗಡೆ" ("in" ಎಂದು ಉತ್ತಮವಾಗಿ ಅನುವಾದಿಸಲಾಗಿದೆ; ಯೋಹಾನನು "ನೀರಿನಲ್ಲಿ" ಮುಳುಗಿಸುತ್ತಿದ್ದನು (JNT).

ಯೋಹಾನನು ಜನರು **ತಿರುಗಿಕೊಳ್ಳಬೇಕೆಂಬುದಕ್ಕೆ** (*eis metanoian*) ದೀಕ್ಷಾಸ್ನಾನ ಮಾಡಿಸಿದನು. ಈ ನಿರ್ದಿಷ್ಟ ವಾಕ್ಯಭಾಗದ ಅರ್ಥವು ಚರ್ಚೆಗೆ ಒಳಗಾಗಿದೆ. Lewis ಸರಿಯಾಗಿ ವ್ಯಾಖ್ಯಾನಿಸಿದ್ದಾರೆ,

> ದೀಕ್ಷಾಸ್ನಾನವು ಪಶ್ಚಾತ್ತಾಪ ಉಂಟುಮಾಡುವದಕ್ಕಾಗಿ ರೂಪಿಸಲ್ಪಟ್ಟಿದೆ ಎಂದು ವಿವಾದಿಸಲಾಗದು, ದೀಕ್ಷಾಸ್ನಾನ ಹೊಂದುವ ಮೊದಲು ಪಶ್ಚಾತ್ತಾಪ ಪಟ್ಟಿರಬೇಕೆಂಬುದು ಪೂರ್ವಪೇಕ್ಷಿತವಾದದ್ದು. ತದ್ವಿರುದ್ಧವಾಗಿ, "ಸರ್ವಸಾಧರಣವಾಗಿ" ಇಲ್ಲಿ *eis* ಉಪಯೋಗಿಸಲಾಗಿದೆ (ಅಂದರೆ, ಜನರು ಪಶ್ಚಾತ್ತಾಪ ಹೊಂದಿರುವದರಿಂದ ಅವರಿಗೆ ದೀಕ್ಷಾಸ್ನಾನ ಕೊಡಲಾಗಿದೆ) ಎಂದು ಹೇಳುವವರು, *eis* ಉಪಯೋಗಿಸಿರುವ ಇಂತಹ ಸಾಮಾಂತರವಾಗಿರುವ ಸಂದರ್ಭಗಳನ್ನು ತೋರಿಸಲಾರದೇ ಇದ್ದಾರೆ. ಒಂದು ವೇಳೆ ನಾವು ಮಾರ್ಕ ಮತ್ತು ಲೂಕನಿಂದ ಉಪಯೋಗಿಸಿರುವ ಪದಗಳ ಮೂಖಾಂತರ **["ಪಶ್ಚಾತ್ತಾಪ ವಿಷಯವಾಗಿರುವ ದೀಕ್ಷಾಸ್ನಾನ" ಮಾರ್ಕ 1:4; ಲೂಕ 3:3]**, ಮತ್ತಾಯನು ಉಪಯೋಗಿಸಿರುವ ಪದವನ್ನು ವ್ಯಾಖ್ಯಾನಿಸಿದರೆ, ಯೋಹಾನನು ಕೊಟ್ಟಿರುವ ದೀಕ್ಷಾಸ್ನಾನವು ಪಶ್ಚಾತ್ತಾಪಕ್ಕೆ ಸಂಬಂಧಿಸಿರುವಂಥದ್ದು ಅಥವಾ ಪಶ್ಚಾತ್ತಾಪದ[33] ಕಡೆಗೆ ತೋರಿಸುವಂಥದ್ದಾಗಿದೆ.

Hagner ರವರು ಈ ವಾಕ್ಯ ಭಾಗವನ್ನು ಹೀಗೆ ಹೇಳಿದ್ದಾರೆ, ಈ ವಾಕ್ಯಭಾಗದ ಭಾವನೆಯು, "ಅದರೊಂದಿಗೆ ನೋಡುವುದಾದರೆ, 'ಸಂಬಂಧದೊಂದಿಗೆ,' ಅಥವಾ 'ಒಪ್ಪಂದದೊಂದಿಗೆ' ಎಂದು ಹೇಳಿಕೊಳ್ಳುವದಾದರೆ ಅದು ಚೆನ್ನಾಗಿ ಅರ್ಥವಾಗುತ್ತದೆ."[34] Gundry ಹೀಗೆ ಹೇಳಿದ್ದಾರೆ, "ಪಶ್ಚಾತ್ತಾಪ ವಿಷಯವಾಗಿರುವ ದೀಕ್ಷಾಸ್ನಾನವು ಅದನ್ನು ಹೊಂದುವವರು ಹೊರಗಡೆ ತೋರಿಕೆಯ ಕಾರ್ಯವಾಗಿ ಅವರು ದೀಕ್ಷಾಸ್ನಾನ ತೆಗೆದುಕೊಳ್ಳುವ ಮುಖಾಂತರ ತೋರಿಸುವಂತವರಾಗಿದ್ದಾರೆ."[35]

ಯೋಹಾನನ ದೀಕ್ಷಾಸ್ನಾನವು ಸಹ "ಪಾಪಗಳ [ಬಿಡುಗಡೆ] ಕ್ಷಮಾಪಣೆಗೋಸ್ಕರವಾಗಿತ್ತು" (ಮಾರ್ಕ 1:4). ಕ್ರಿಸ್ತನು ಶಿಲುಬೆ ಮೇಲೆ ಸಾಯುವವರೆಗೆ ಕ್ಷಮಾಪಣೆಗೆ ನಿಜವಾದ ಒಂದು ಅರ್ಥ ಹೊಂದಿಕೊಳ್ಳಲು ಆಗಲಿಲ್ಲ (ರೋಮಾಪುರ 3:21-26; ಇಬ್ರಿಯ 9:11-28), ಈ ಉದ್ದೇಶದ ಹೇಳಿಕೆಯಿಂದ ಯೋಹಾನನು ಕೊಡುವ ದೀಕ್ಷಾಸ್ನಾನವು ನ್ಯಾಯಬದ್ಧವಾಗಿತ್ತು. ಯೋಹಾನನಿಂದ ದೀಕ್ಷಾಸ್ನಾನ ತೆಗೆದುಕೊಂಡವರು ಕ್ರಿಸ್ತನು ಮರಣ ಹೊಂದುವ ಮೊದಲು ಪುನಃ ದೀಕ್ಷಾಸ್ನಾನ ತೆಗೆದುಕೊಂಡಿರುವದು ನಾವು ಕಂಡುಕೊಂಡಿರುವುದಿಲ್ಲ (ಅಪೊಸ್ತಲರ ಕೃತ್ಯಗಳು 1:15; 2:41; NIV). ಕ್ರಿಸ್ತನ ಮರಣದ ನಂತರ ಯೋಹಾನನಿಂದ ದೀಕ್ಷಾಸ್ನಾನ ಹೊಂದಿದವರು ಪೌಲನಿಂದ ಪುನಃ ದೀಕ್ಷಾಸ್ನಾನ ಪಡೆದುಕೊಂಡವರನ್ನು ಎಫೆಸದಲ್ಲಿ ಪೌಲನು ಕಂಡುಕೊಂಡ ಹನ್ನೆರಡು ಮಂದಿಯ ಕುರಿತ ದಾಖಲೆಯನ್ನು ವಾಕ್ಯದಲ್ಲಿ ಒಂದೇ ಒಂದು ಸಾರಿ ಪ್ರಸ್ತಾಪಿಸಲಾಗಿದೆ (ಅಪೊಸ್ತಲರ ಕೃತ್ಯಗಳು 19:1-7). ಪಂಚಶತ್ತಮ ದಿನದಂದು ಮಹಾನಿಯೋಗಕ್ಕೆ ಸಂಬಂಧಿಸಿದ ದೀಕ್ಷಾಸ್ನಾನ ಪರಿಚಯಿಸಲ್ಪಟ್ಟ ನಂತರ ಯೋಹಾನನ ದೀಕ್ಷಾಸ್ನಾನವು ಇನ್ನೆಂದಿಗೂ ನ್ಯಾಯಬದ್ಧವಾಗಿಲ್ಲ.

ನನ್ನ ಹಿಂದೆ ಬರುವವನು **ನನಗಿಂತ ಶಕ್ತನು** ಅದಕ್ಕಾಗಿ ನಾನು ಕ್ರಿಸ್ತನ ಮುನ್‌ಸೂಚಕನೆಂದು ಕಳಿಸಲ್ಪಟ್ಟವನು ಮಾತ್ರವೇ ಎಂದು ತುಂಬಾ ದೀನತೆಯಿಂದ ಯೋಹಾನನು ಸ್ಪಷ್ಟಪಡಿಸಿದ್ದಾನೆ (ಯೋಹಾನ 1:19-36; 3:28-30). **ಆದರೆ ನನ್ನ ಹಿಂದೆ ಬರುವವನು** ಎಂಬ ಈ ವಾಕ್ಯಭಾಗವು ಕ್ರಮಾನುಸಾರದ ಸ್ವರೂಪವಾಗಿತ್ತು, ಆದರೆ ಅದು ಮೆಸ್ಸೀಯನ ಕುರಿತು ವರ್ಣಿಸುವಂಥದ್ದಾಗಿದೆ - "ಬರಬೇಕಾದವನು ಆತನೆ" (11:2, 3; NRSV).[36] **ಆತನ ಕೆರಗಳನ್ನು ಹೊರಲಿಕ್ಕೂ ನಾನು ಯೋಗ್ಯನಲ್ಲ** ಎಂದು ಯೋಹಾನನು ಹೇಳಿದ್ದಾನೆ. Morris ಹೀಗೆ ವಿವರಿಸಿದ್ದಾರೆ,

> ಆ ದಿನಗಳಲ್ಲಿ ಶಿಕ್ಷಕರು ಪಾಲೇಸ್ತೀನದಲ್ಲಿ ಯಾವುದೇ ಸಂಬಳ ಪಡೆಯುತ್ತಿರಲಿಲ್ಲ, ಆದರೆ ಸಾಮಾನ್ಯವಾಗಿ ಶಿಷ್ಯರು ತಮ್ಮ ಗುರುಗಳಿಗೆ ಏನು ಮಾಡಲು ಸಾಧ್ಯವೋ ಅದನ್ನು ಮಾಡುತ್ತಿದ್ದರು. ರಬ್ಬಿಯರಲ್ಲಿ ಒಂದು ನಾಣ್ಣುಡಿಯಿದೆ, "ಒಬ್ಬ ಗುಲಾಮನು

> ತನ್ನ ಯಜಮಾನನಿಗೆ ಏನೇನು ಸೇವೆ ಸಲ್ಲಿಸುತ್ತಾನೋ, ಕೆರದ ಒಂದು ಚರ್ಮದ ಬಾರನ್ನು ತೆಗೆಯುವದು ಬಿಟ್ಟು ಶಿಷ್ಯರು ತನ್ನ ಶಿಕ್ಷಕರಿಗೆ ಅದನ್ನು ಮಾಡಬೇಕಾಗಿತ್ತು." ಆ ಸೇವೆಯನ್ನು ಮಾಡಲು ನಾನು ಯೋಗ್ಯನಲ್ಲ ಆದರೆ ಒಬ್ಬ ಗುಲಾಮನು ಅದನ್ನು ಮಾಡಬಹುದಾಗಿದೆ ಎಂದು ಹೇಳುವುದರ ಮುಖಾಂತರ ಯೋಹಾನನ ತನ್ನ ದೀನತೆಯನ್ನು ಸೂಚಿಸಿದ್ದಾನೆ.[37]

ಯೋಹಾನನು ನನ್ನ ಹಿಂದೆ ಬರುವಾತನು **ಪವಿತ್ರಾತ್ಮನಲ್ಲಿಯೂ ಬೆಂಕಿಯಲ್ಲಿಯೂ ... ಸ್ನಾನ ಮಾಡಿಸುವನು** ಎಂದು ಹೇಳಿದನು. ಈ ಪ್ರವಾದನೆಯ ಮೂಲಕ ಕ್ರಿಸ್ತನು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಲ್ಲ ಎಂಬ ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ. ಇದು ಯೋಹಾನನ ಅರ್ಥವಾಗಿರುವದಿಲ್ಲ, ಯಾಕೆಂದರೆ ಯೋಹಾನನು ದೃಢಪಡಿಸಿದ ಸ್ವಲ್ಪ ಕಾಲದಲ್ಲಿಯೇ ಜನರು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಯೇಸು ಆಜ್ಞಾಪಿಸಿದನು (ಯೋಹಾನ 3:26; 4:1, 2). ನೀರಿನಲ್ಲಿ ದೀಕ್ಷಾಸ್ನಾನ ಕೊಡುವುದನ್ನು ಸೇರಿಸಿ, ಯೇಸು ಪವಿತ್ರಾತ್ಮನಲ್ಲಿಯೂ ಮತ್ತು ಬೆಂಕಿಯಲ್ಲಿಯೂ ದೀಕ್ಷಾಸ್ನಾನ ಮಾಡಿಸುವನು ಎಂದು ಯೋಹಾನನು ಸ್ಪಷ್ಟವಾದ ಅರ್ಥವನ್ನು ವ್ಯಕ್ತಪಡಿಸಿದ್ದಾನೆ.

ಯೇಸು ಪರಲೋಕಕ್ಕೆ ಹಿಂತಿರುಗುವ ಮೊದಲು, ಆತನು ಹೋದ ತಕ್ಷಣ ಅವರಿಗೆ ಪವಿತ್ರಾತ್ಮನನ್ನು ಕಳುಹಿಸಿಕೊಡುತ್ತೇನೆಂದು ಅಪೊಸ್ತಲರಿಗೆ ವಾಗ್ದಾನ ಮಾಡಿದ್ದನು (ಯೋಹಾನ 14:16, 17, 26; 15:26, 27; 16:7-15). ತಂದೆಯ ಬಳಿಗೆ ಏರಿ ಹೋಗುವ ಮುನ್ನ, ಅವರಿಗೆ, "ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ ಪವಿತ್ರಾತ್ಮದಲ್ಲಿ ಸ್ನಾನವಾಗುವದು" ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 1:5). ಪವಿತ್ರಾತ್ಮನು ನಿಮ್ಮ ಮೇಲೆ ಬರಲು, "ನೀವು ಬಲವನ್ನು ಹೊಂದಿ," "ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು" ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 1:8). ಯೇಸು ಪರಲೋಕಕ್ಕೆ ಆರೋಹಣವಾದದ್ದನ್ನು ಹಿಂಬಾಲಿಸಿ ಪಂಚಶತ್ತಮ ದಿನದಂದು ಈ ವಾಗ್ದಾನವು ನೆರವೇರಿತು. ಆ ದಿನದಂದೇ, ಅಪೊಸ್ತಲರು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು (ಅಪೊಸ್ತಲರ ಕೃತ್ಯಗಳು 2:4, 7, 14, 15). ಅಪೊಸ್ತಲರು ತಮ್ಮ ಕೈಗಳನ್ನು ಮೇಲೆ ಇಡದೆ (ಅಪೊಸ್ತಲರ ಕೃತ್ಯಗಳು 8:14-19; 19:1-7), ಪವಿತ್ರಾತ್ಮನು ತನ್ನಷ್ಟಕ್ಕೆ ತಾನೇ ಪರಲೋಕದಿಂದ ಮತ್ತೊಮ್ಮೆ ಬಂದಿರುವದು ಕೊರ್ನೇಲ್ಯನ ಮನೆಯಲ್ಲಿ ಮಾತ್ರವೇ (ಅಪೊಸ್ತಲರ ಕೃತ್ಯಗಳು 10:24, 44, 45; 11:15-17). ಈ ಎರಡು ಸಂದರ್ಭಗಳಲ್ಲಿ, "ಪವಿತ್ರಾತ್ಮನನ್ನು ಎಲ್ಲಾ ಮನುಷ್ಯರ ಮೇಲೆ," ಯೆಹೂದ್ಯರು ಮತ್ತು ಅನ್ಯರ ಮೇಲೆ ಕ್ರಿಸ್ತನು ಕಳುಹಿಸಿದನು. ಇದರ ಫಲವಾಗಿ ಅನೇಕ ಆತ್ಮಗಳು ರಕ್ಷಣೆ ಹೊಂದಿದವು (ಅಪೊಸ್ತಲರ ಕೃತ್ಯಗಳು 2:41; 10:47, 48). ಪರಿಶುದ್ಧಾತ್ಮ ದೀಕ್ಷಾಸ್ನಾನವು ಯೋವೇಲನ ಪ್ರವಾದನೆ ಪ್ರಕಾರ ನೆರವೇರಿರುವಂತದ್ದಾಗಿದೆ:

> "ತರುವಾಯ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು; ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು; ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು, ನಿಮ್ಮ ಯೌವ್ವನಸ್ತರಿಗೆ ದಿವ್ಯದರ್ಶನಗಳಾಗುವವು" (ಯೋವೇಲ 2:28; ನೋಡಿರಿ ಅಪೊಸ್ತಲರ ಕೃತ್ಯಗಳು 2:17).

ಯೋಹಾನನು ಹೇಳಿದ ಬೆಂಕಿಯ ದೀಕ್ಷಾಸ್ನಾನ "ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು" ಎಂಬುದನ್ನು ಅಪೊಸ್ತಲರು ಕಂಡಾಗ ಆ ಕ್ಷಣದಲ್ಲೇ ಆಗಿದೆ ಎಂದು

ಕೆಲವರು ಬೋಧಿಸುತ್ತಾರೆ (ಅಪೊಸ್ತಲರ ಕೃತ್ಯಗಳು 2:3). ಹಾಗಿದ್ದರೂ, ಇವು ಅಕ್ಷರಾಂಶವಾಗಿ ಉರಿಯುತ್ತಿದ್ದ ನಾಲಿಗೆಗಳಲ್ಲ, ಆದರೂ ಅಂತಹವುಗಳಾಗಿ ಕಾಣಿಸಿಕೊಂಡವು. ಅಪೊಸ್ತಲರು ("ದೀಕ್ಷಾಸ್ನಾನದ" ಅರ್ಥ) ಬೆಂಕಿಯಲ್ಲಿ ಮುಳಗಲಿಲ್ಲ. ಯೋಹಾನನು ತನ್ನ ಸ್ವಂತ ವಿವರಣೆಯನ್ನು ಮುಂದಿನ ವಚನದಲ್ಲಿ ವಿವರಿಸಿದ್ದಾನೆ.

**ವಚನ 12.** ಮೆಸ್ಸೀಯನು ಸುಗ್ಗಿಯ ಕಾಲದಲ್ಲಿ ವ್ಯವಸಾಯಗಾರನಂತೆ ವರ್ಣಿಸಲ್ಪಟ್ಟಿದ್ದಾನೆ. ಹೊಲದಲ್ಲಿ ಬೆಳೆಯನ್ನು ಕೊಯ್ದ ತರುವಾಯ ಅವುಗಳನ್ನು **ಕಣಕ್ಕೆ** ತರುವರು. ಅಲ್ಲಿ ಕುಟ್ಟುವ ಯಂತ್ರ ಎತ್ತುಗಳಿಂದ ಎಳೆದು ಕಾಳುಗಳು ಕಡ್ಡಿಯಿಂದ ಬೇರ್ಪಡಿಸುವರು. ವ್ಯವಸಾಯಗಾರನು ಈ ಕಾಳುಗಳನ್ನು ಗಾಳಿಯಲ್ಲಿ ತೂರುವದಕ್ಕಾಗಿ **ಮೊರವನ್ನು** ತೆಗೆದುಕೊಳ್ಳುತ್ತಾನೆ. ಗಾಳಿಯು ಗಟ್ಟಿಯಾದ ಕಾಳು ಮತ್ತು ಹೊಟ್ಟನ್ನು ಬೇರ್ಪಡಿಸುತ್ತದೆ; ಈ ಕಾಳುಗಳು ಅಲ್ಲಿಯೇ ರಾಶಿಗೆ ಸೇರಿಕೊಳ್ಳುತ್ತವೆ, ಹೊಟ್ಟು ಗಾಳಿಯಿಂದ ದೂರಕ್ಕೆ ತೆಗೆದುಕೊಂಡು ಹೋಗುತ್ತದೆ. ವ್ಯವಸಾಯಗಾರನು ತನ್ನ **ಗೋದಿಯನ್ನು ಕಣಜದಲ್ಲಿ ತುಂಬುತ್ತಾನೆ**. ಆತನು ಆ ಹೊಟ್ಟನ್ನು ಒಂದು ಗುಡ್ಡೆಯಾಗಿ ಸೇರಿಸಿ ಅದನ್ನು ಸುಡುತ್ತಾನೆ ಅಥವಾ ಇದನ್ನು ಬೆಂಕಿಗಾಗಿ ಎಣ್ಣೆಯಂತೆ ಉಪಯೋಗಿಸಲು ಅದನ್ನು ಒಟ್ಟುಗೂಡಿಸುತ್ತಾನೆ. ಕ್ರಿಸ್ತನು ಅದೇ ರೀತಿಯಲ್ಲಿ ಮಾಡುವನು: **ಆರಿಸಲು ಆಗದ ಬೆಂಕಿಯಲ್ಲಿ ಈ ಹೊಟ್ಟನ್ನು ಸುಡುವನು.** ಮಲಾಕಿ 4:1ರಲ್ಲಿರುವ ಮೆಸ್ಸೀಯನಿಗೆ ಸಂಬಂಧಿಸಿದ ಪ್ರವಾದನೆಯಲ್ಲಿ ಹೊಟ್ಟು "ಅಹಂಕಾರರಿಗೆ ಮತ್ತು ದುಷ್ಕರ್ಮಿಗಳಿಗೆ" ಗುರುತಿಸುತ್ತದೆ. "ಬೇರೂ ಅಥವಾ ಕೊಂಬೆ" ಇಲ್ಲದವರಾಗಿ ಇರುತ್ತಾರೆ (ನೋಡಿರಿ 3:10). ಹಳೆ ಒಡಂಬಡಿಕೆಯಲ್ಲಿ ನ್ಯಾಯ ತೀರ್ಪನ್ನು ಸೂಚಿಸುವದಕ್ಕೆ ಕುಟ್ಟುವ ಯಂತ್ರವನ್ನು ಉಪಯೋಗಿಸಿರುವುದು ಒಂದು ಗಮನಿಸುವ ವಿಷಯವಾಗಿದೆ (ಕೀರ್ತನೆ 1:4; ಯೆಶಾಯ 17:13; 29:5, 6; 33:11; 41:15, 16; ಯೆರೆಮೀಯ 15:7; ಹೋಶೆಯ 13:3; ಚೆಪನ್ಯ 2:2).

ಯೋಹಾನನು ಹೇಳಿರುವ ಬೆಂಕಿಯಲ್ಲಿ ದೀಕ್ಷಾಸ್ನಾನವು ಅನೀತಿವಂತರು ಬೆಂಕಿಯ ಕೆರೆಯಲ್ಲಿ ಹಾಕಲ್ಪಡುವ ನ್ಯಾಯ ತೀರ್ಪನ್ನು ಸೂಚಿಸುತ್ತದೆ (ಪ್ರಕಟಣೆ 20:11-15; 21:8). ಮತ್ತಾಯನ ಸುವಾರ್ತೆಯಲ್ಲಿ ಬೆಂಕಿಯು ಯಾವಾಗಲು ನ್ಯಾಯ ತೀರ್ಪಿಗೆ ಸೂಚಕವಾಗಿ ಉಪಯೋಗಿಸಲಾಗಿದೆ (5:22; 7:19; 13:40, 42; 18:8, 9; 25:31-33, 41, 46). ನಾವು ಬೆಂಕಿಯಲ್ಲಿ ದೀಕ್ಷಾಸ್ನಾನಕ್ಕಾಗಿ ಪ್ರಾರ್ಥಿಸ ಬಾರದು, ಯಾಕೆಂದರೆ, ಈ ಒಂದು ದೀಕ್ಷಾಸ್ನಾನ ನಾವು ಸ್ವೀಕರಿಸುವಂತದ್ದಾಗಿರುವದಿಲ್ಲ.

## ಪಾಠಗಳು

## ಸ್ನಾನಿಕನಾದ ಯೋಹಾನನ ವ್ಯಕ್ತಿಪರಿಚಯ

## (3:1-17)

ಬೋಧಕರು ಒಂದು ಉದ್ಯೋಗಕ್ಕೆ ಹೋಗುತ್ತಾರೆಂದು ಅವಲೋಕಿಸಿಕೊಳ್ಳೋಣ, ಅವರು ಹೋಗುವಾಗ ಅವರಿಗೆ ಒಂದು ವ್ಯಕ್ತಿಪರಿಚಯವನ್ನು (resume) ಕೇಳುತ್ತಾರೆ. ಭರವಸೆಯಿಂದ, ಸಹೋದರನು ಒಬ್ಬ ವ್ಯಕ್ತಿಯನ್ನು ಕೆಲಸಕ್ಕೆ ತೆಗೆದುಕೊಂಡರೆ ಯಾವ ಕೆಲಸ ಮಾಡಬಹುದು ಎಂದು ಸ್ವಲ್ಪವಾದರೂ ಆತನು ನಿರೀಕ್ಷಿಸುತ್ತಾನೆ. ಯೋಹಾನನು ಇಲ್ಲಿರುವ ಕೆಲವು ವಿಷಯಗಳನ್ನು ತನ್ನ ಕುರಿತಾಗಿ ಹೇಳಿದ್ದಾನೆಂದು ಈ ಅಧ್ಯಾಯವು ಹೇಳುತ್ತದೆ.

*ಹೆಸರು:*

ಯೋಹಾನ, ನಾನು ಪಾಪಗಳ ಕ್ಷಮಾಪಣೆಗಾಗಿ ದೀಕ್ಷಾಸ್ನಾನದ ಕುರಿತು ಬೋಧಿ ಸಿ

ದಿದ್ದರಿಂದ ಮತ್ತು ಅನೇಕರಿಗೆ ದೀಕ್ಷಾಸ್ನಾನ ಕೊಟ್ಟಿದ್ದರಿಂದ ಈಗ ನಾನು ಸ್ನಾನಿಕನಾದ ಯೋಹಾನನೆಂದು ಗುರುತಿಸಲ್ಪಟ್ಟಿದ್ದೇನೆ (3:1).

*ತಂದೆ ತಾಯಿಗಳು:*

ಜಕರೀಯನು, ಅಭಿಯಾನ ವರ್ಗಕ್ಕೆ ಸೇರಿದ ಯಾಜಕನಾಗಿದ್ದನು, ಮತ್ತು ಎಲಜಬೇತ್ ಆರೋನನ ಮಗಳು (ಲೂಕ 1:5).

*ಬಹಳ ದಿನಗಳಿಂದ ವಾಸವಾಗಿದ್ದ ಸ್ಥಳ:*

ಯೂದಾಯದ ಮರುಭೂಮಿ, ಅಲ್ಲಿ ನನಗೆ ಮಿಡತೆಗಳು ಮತ್ತು ಕಾಡುಜೇನು ಆಹಾರವಾಗಿದೆ (3:1, 4).

*ಮುಖ್ಯ ಬೋಧನೆಯ ಜವಾಬ್ದಾರಿ:*

ಕರ್ತನಿಗಿಂತ ಮೊದಲು ಹೋಗಿ ಮಾರ್ಗಗಳನ್ನು ಸಿದ್ಧಮಾಡುವದು, ಆತನ ಜನರಿಗೆ ಪಾಪ ಕ್ಷಮಾಪಣೆಯಿಂದ ರಕ್ಷಣೆ ಇದೆ ಎನ್ನುವ ಜ್ಞಾನ ಕೊಡುವಂಥದ್ದು (ಲೂಕ 1:76, 77).

*ಇತ್ತೀಚಿನ ಬೋಧಿಸುವ ಕರ್ತವ್ಯಗಳು;*

ದೇವರ ರಾಜ್ಯ ಹತ್ತಿರವಾಗಿದೆ, ಪಶ್ಚಾತ್ತಾಪಪಡಿರಿ ಎಂದು ಜನರಿಗೆ ಅಡವಿಯಲ್ಲಿ ಕೂಗುವವನ ಶಬ್ದವಾಗಿದ್ದೇನೆ (3:3).

*ನನ್ನ ಬೋಧನೆಯಲ್ಲಿ ...*

- ಪಾಪವನ್ನು ನಾನು ಕಡಿಮೆಯಾಗಿ ಮಾಡಲಿಲ್ಲ (3:1, 2).
- ಯಾವ ಅನೂಕೂಲವು ಮತ್ತು ತೃಪ್ತಿಯು ನನ್ನನ್ನು ಸುವಾರ್ತೆ ಸಾರದಂತೆ ಮಾಡಲಾರದು (3:1, 3, 4).
- ಪ್ರತಿಸ್ಪಂದಿಸದ ಕೇಳುಗರಿಗೆ ಪ್ರಸಿದ್ಧಿಯಿಲ್ಲದ ಅಂಶಗಳನ್ನು ನಾನು ಬೋಧಿಸುತ್ತೇನೆ (3:5-9).
- ನಾನು ಯೇಸುವನ್ನು ಹೊಗಳುತ್ತೇನೆ (3:11, 12).
- ಒಬ್ಬರು ಕಳೆದುಹೋಗುವ ನಾಶವಾಗುವ ಸಾಧ್ಯತೆ ಇದೆ ಎಂದು ನಾನು ಎಚ್ಚರಿಸುತ್ತೇನೆ (3:10-12).
- ಒಬ್ಬನು ರಕ್ಷಣೆ ಹೊಂದಬಹುದೆಂದು ನಾನು ಬೋಧಿಸುತ್ತೇನೆ (3:12).[38]

*ಗುರಿಗಳು:*

ನಾನು ನನ್ನ ಗುರಿಗಳನ್ನು ಹೆಚ್ಚಾಗಿ ಮುಟ್ಟಿದ್ದೇನೆ ಮತ್ತು ಅದರಿಂದ ಅಸಾಧಾರಣವಾದ ಅನುಭವ ಹೊಂದಿದ್ದೇನೆ (3:13-17).

*ಸದ್ಯದವರೆಗೆ:*

ಸದ್ಯದಲ್ಲಿ, ಹೆರೋದ ರಾಜನನ್ನು ಖಂಡಿಸಿದ್ದಕ್ಕೆ ನಾನು ಜೈಲಿನಲ್ಲಿದ್ದೇನೆ (ಲೂಕ 3:19, 20). ಹಾಗಿದ್ದರೂ ನಾನು ಹೆರೋದ ರಾಜನ ಅಧೀನದಲ್ಲಿದ್ದರೂ, ನಾನು ನನ್ನ ಕರ್ತನ ಬಲದ ಮುಖಾಂತರ ಸ್ವತಂತ್ರವಾಗಿದ್ದೇನೆ.

## ಯೋಹಾನ ಮತ್ತು ಯೇಸುವಿನಿಂದ ಪಾಠಗಳು

## (3:1-17)

ಸ್ನಾನಿಕನಾದ ಯೋಹಾನನು (ಆತನು ಜನರಿಗೆ ದೀಕ್ಷಾಸ್ನಾನ ಮಾಡಿಸುತ್ತಿದ್ದರಿಂದ ಆತನಿಗೆ ಈ ಹೆಸರಿನಿಂದ ಕರೆಯುತ್ತಿದ್ದರು) ಸುಮಾರು ನಾಲ್ಕು ನೂರು ವರ್ಷಗಳಿಂದ ಇರುವ ಮೌನಕಾಲವನ್ನು ಮುರಿದು ಯುದಾಯದ ಅಡವಿಯಲ್ಲಿ ಸಾರಿಹೇಳುತ್ತಾ ಮತ್ತು ಜನರನ್ನು ಪಶ್ಚಾತ್ತಾಪಕ್ಕಾಗಿ ಕರೆಯುತ್ತಿದ್ದನು. ಆತನು ತನ್ನ ಒರಟಾದ ಉಡುಪಿನಿಂದ ಮತ್ತು ಬಲವಾದ

ಸಂದೇಶದಿಂದ ಜನರನ್ನು ತನ್ನ ಕಡೆಗೆ ಆಕರ್ಷಿಸುತ್ತಿದ್ದನು. ಯೇಸು ಆ ಸಮಯಕ್ಕೆ ತನ್ನ ಹದಿನೆಂಟು ವರ್ಷದ ಸ್ವಂತ ಮೌನವನ್ನು ಮುರಿದನು. ನಮಗೆ ಗೊತ್ತಿದಂತೆಯೇ, ಆತನು ತನ್ನ ಹನ್ನೆರಡನೆಯ ವರ್ಷದಲ್ಲಿ ಬೋಧನೆಯನ್ನು ಕೇಳಿದನು ಮತ್ತು ಈ ಸಮಯದಲ್ಲಿ ಮೂವತ್ತು ವರ್ಷದವನಾಗಿದ್ದನು (ಲೂಕ 2:42; 3:23). ಈ ಕಥೆಯು ಕೆಲವು ಪಾಠಗಳನ್ನು ನಮಗಾಗಿ ತಿಳಿಸುತ್ತದೆ.

1. ದೇವರಿಗೆ ಸೇವೆ ಸಲ್ಲಿಸಲು ಮೊದಲು ಬೇಕಾಗಿರುವದು ಸಿದ್ಧತೆ (3:1-3).
2. ಸಂದೇಶ ಕೊಡುವವನ ಹೊರಗಿನ ತೋರಿಕೆಯನ್ನು ನೋಡಿ ಸಂದೇಶದ ಪ್ರಾಮುಖ್ಯತೆಯನ್ನು ಮೌಲ್ಯಮಾಪನ ಮಾಡಬಾರದು (3:4-6).
3. ನಿಷ್ಕಪಟವಾದ ಪಶ್ಚಾತ್ತಾಪ ಮತ್ತು ಒಪ್ಪಿಸಿಕೊಡುವಿಕೆಯಿಲ್ಲದೆ ದೀಕ್ಷಾಸ್ನಾನವು ಅದರ ಉದ್ದೇಶಕ್ಕೆ ಪರಿಣಾಮಕಾರಿಯಾಗಿರುವುದಿಲ್ಲ (3:5-9).
4. ದೇವರಿಗೆ ವಿಧೇಯತೆಯಿಂದಿರಲು ಯಾರೊಬ್ಬರು ಹೊರತಾಗಿರುವುದಿಲ್ಲ (3:13-15).
5. ದೇವರ ಮಕ್ಕಳಾಗಿ ಅಂಗಿಕರಿಸಬೇಕೆಂಬುದು ಪರಲೋಕವನ್ನು ಹುಡುಕುವವರ ಕೊನೆಯ ಅವಶ್ಯಕತೆಯಾಗಿದೆ (3:16, 17).[39]

## ಕ್ರಿಸ್ತನಿಗೋಸ್ಕರ ಯೋಹಾನನ ಸಿದ್ಧತೆ (3:1-12)

ಮುಂದೆ ಬರುವ ಕ್ರಿಸ್ತನಗಾಗಿ ಯೋಹಾನನ ಸಿದ್ಧತೆ ಮೇಲಿನ ಒಂದು ಪಾಠವನ್ನು ಈ ಕೆಳಗಿನ ಅಂಶಗಳಿಂದ ಸಿದ್ಧಪಡಿಸಬಹುದು:

1. ಸಿದ್ಧ ಮಾಡುವ ಸಂದೇಶ (3:1-4);
2. ಸಿದ್ಧ ಮಾಡುವ ದೀಕ್ಷಾಸ್ನಾನ (3:5, 6);
3. ಸಿದ್ಧ ಮಾಡುವ ಪಶ್ಚಾತ್ತಾಪ (3:7-12).

## ಬೋಧಕನ ನಮ್ರತೆ (3:11-14)

ಯೋಹಾನನು ಕ್ರಿಸ್ತನ ಸನ್ನಿದಾನದಲ್ಲಿ ನಿಂತುಕೊಂಡಿರುವಾಗ ತನ್ನ ಕ್ಷಮಾಪಣೆಗಾಗಿ ಆತ್ಮೀಕ ಅವಶ್ಯಕತೆಯನ್ನು ದೀನತೆಯಿಂದ ಗುರುತಿಸಿಕೊಳ್ಳುತ್ತಾನೆ. ತನಗೆ ದೀಕ್ಷಾಸ್ನಾನದ ಅವಶ್ಯಕತೆ ಇದೆಯೆಂದು ಮತ್ತು ಯೇಸುವಿಗೆ ದೀಕ್ಷಾಸ್ನಾನ ಕೊಡಲು ತಾನು ಯೋಗ್ಯನಲ್ಲ ವೆಂದು ಯೋಹಾನನು ಯೇಸುವಿಗೆ ಸ್ವತಂತ್ರನಾಗಿ ಹೇಳಿದ್ದಾನೆ. ತನ್ನ ಹಿಂದೆ ಬರುವವನ ಕುರಿತು ಯೋಹಾನನು ಜನರಿಗೆ ತಿಳಿಸಿದ್ದಾನೆ. ಆತನು ಯೇಸುವೇ ಮೆಸ್ಸೀಯನೆಂದು ಕಂಡುಕೊಂಡಾಗ ಜನರಿಗೆ ಆತನನ್ನು ತೋರಿಸಿದನು (ಯೋಹಾನ 1:29). ಯೋಹಾನನ ನಮ್ರತೆಯ ಉದಾಹರಣೆಯು ಇಂದು ಬೋಧಕರು ಅನುಕರಿಸಬೇಕಾಗಿದೆ.[40]

*ಬೋಧಕರು ತಮ್ಮ ಪಾಪವನ್ನು ಗುರುತಿಸಿ, ದೇವರ ಮುಂದೆ ನಮ್ರತೆಯುಳ್ಳವರಾಗಿರಬೇಕು.* ಬೋಧಕರು "ಗಾಯಗಳನ್ನು ವಾಸಿ ಮಾಡುವವರು" ಎಂದು ಹೇಳಲಾಗಿದೆ. ದೇವರಿಂದ ಅನುಭವಿಸಿರುವ ಕೃಪೆಯನ್ನು ಇತರರಿಗೆ ಅವರು ವಿಸ್ತರಿಸುತ್ತಾರೆ. ಪೌಲನು ರೋಮಾ ದೇಶದಲೆಲ್ಲಾ ಪ್ರಯಾಣಿಸಿ ಕ್ರಿಸ್ತನ ಶುಭವಾರ್ತೆಯನ್ನು ಸಾರುತ್ತಾ ಇರುವಾಗ, ಆತನು ಪಾಪಿಗಳ "ಮುಖ್ಯಸ್ಥನು" ಎನ್ನುವದನ್ನು ಎಂದಿಗೂ ಆತನು ಮರೆಯಲಿಲ್ಲ (1 ತಿಮೋಥೆ 1:15; KJV).

*ಬೋಧಕರು ತಮ್ಮ ಸಂದೇಶವನ್ನು ಮೊದಲು ತಮಗೆ ಅನ್ವಹಿಸಿಕೊಳ್ಳಬೇಕು.* ಯೇಸು ಫರಿಸಾಯರಿಗೆ ಸಿಟ್ಟಿನಿಂದ ಗದರಿಸಿದನು ಯಾಕೆಂದರೆ "ಅವರು ತಾವು ಬೋಧಿಸುವುದನ್ನು ಕೈಕೊಂಡು ನಡೆಯುತ್ತಿರಲಿಲ್ಲ" (23:3; NIV). ಬೋಧಕರು

ಕೇವಲ ಹೊರಗಿನ ತೋರಿಕೆಯನ್ನು ತೋರಿಸುವುದಾದರೆ ಆತನು ಉತ್ತಮವಾದ ಪರಿಣಾಮಕಾರಿಯಾಗಿರಲಾರನು (ನೋಡಿರಿ 7:1-5). ಪೌಲನು ಇತರರಿಗೆ ಬೋಧಿಸಿದ ತರುವಾಯ, ತನ್ನಷ್ಟಕ್ಕೆ ತಾನೇ "ಅಯೋಗ್ಯನಾಗಬಾರದು" ಎಂದು ಸ್ವಂತ ಶಿಸ್ತನ್ನು ಅಭ್ಯಾಸ ಮಾಡುವದರಲ್ಲಿ ಪ್ರಜ್ಞೆಯುಳ್ಳವನಾಗಿದ್ದನು (1 ಕೊರಿಂಥ 9:27). ಆತನು ತನ್ನ ಸಂದೇಶ ವನ್ನು ಮಾದರಿಯೊಂದಿಗೆ ಪೂರ್ಣಗೊಳಿಸುವದರಲ್ಲಿ ಎಚ್ಚರವಾಗಿದ್ದನು. "ನಾನು ಕ್ರಿಸ್ತನನ್ನು ಅನುಸರಿಸುವಂತೆಯೇ ನೀವು ನನ್ನನ್ನು ಅನುಸರಿಸುವವರಾಗಿರಿ" ಎಂದು ಆತನು ಬರೆದಿದ್ದಾನೆ (1 ಕೊರಿಂಥ 11:1).

*ಬೋಧಕರು ತಮ್ಮನ್ನು ತಾವೇ ತೋರಿಸಿಕೊಳ್ಳದೆ ಯೇಸುವನ್ನು ತೋರಿಸಲೇ ಬೇಕಾಗಿದೆ.* ತಮ್ಮ ಸುವಾರ್ತಾ ಕಾರ್ಯದಲ್ಲಿ ಸ್ವಾಭಾವಿಕವಾಗಿ ಬೋಧಕರು ತಮ್ಮನ್ನು ಕೇಂದ್ರಿಕರಿಸಿಕೊಳ್ಳುವದು ಸರಳವಾಗಿದೆ. ಹಾಗಿದ್ದರೂ, ಕ್ರಿಸ್ತನು ಮುಖ್ಯವಾದ ಕೇಂದ್ರ ಬಿಂದುವಾಗಿರಬೇಕು; ಬೋಧಕರು ಕೇವಲ ಸಂದೇಶ ವಾಹಕರಾಗಿರಬೇಕು. "ನಮ್ಮನ್ನೇ ಪ್ರಸಿದ್ಧಿಪಡಿಸಿಕೊಳ್ಳದೆ ನಮ್ಮನ್ನು ಯೇಸುವಿನ ನಿಮಿತ್ತ ನಿಮ್ಮ ದಾಸರೆಂತಲೂ ಕ್ರಿಸ್ತನೇ ಕರ್ತನೆಂತಲೂ ಪ್ರಸಿದ್ಧಿಪಡಿಸುತ್ತೇವೆ" ಎಂದು ಪೌಲನು ಹೇಳಿದ್ದಾನೆ (2 ಕೊರಿಂಥ 4:5).

*ಮುಕ್ತಾಯ.* ಬೋಧಕರು, ಸ್ನಾನೀಕನಾದ ಯೋಹಾನನ ನಡತೆಯನ್ನು, ಗುಣವನ್ನು ಅನುಸರಿಸುವಾಗ ಅವರು ಇತರರಿಗೆ ಕ್ರಿಸ್ತನನ್ನು ತೋರಿಸುತ್ತಾರೆ ಮತ್ತು ದೇವರ ರಾಜ್ಯಕ್ಕೆ ಅವರು ಇನ್ನು ಹೆಚ್ಚು ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಬಹುದು. David Stewart

---

ಟಿಪ್ಪಣಿಗಳು

[1]ಹಳೆ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ಮಧ್ಯದ ಕಾಲ ಶೂನ್ಯವಾಗಿತ್ತು ಮತ್ತು ನಂಬಿಗಸ್ತ ಪ್ರವಾದಿ ಹಿಂತಿರುಗಿ ಬರುವವನು ಇದ್ದಾನೆ ಎಂದು ಯೆಹೂದ್ಯರು ತಿಳಿದುಕೊಂಡಿದ್ದರು (1 Maccabees 4:46; 9:27; 14:41; Josephus *Against Apion* 1.8). [2]Josephus ರವರು "ಜನಸಮೂಹ"ದ ಕುರಿತು ಬರೆದಿದ್ದಾನೆ. ಅವರು ಯೋಹಾನನ ಮಾತುಗಳನ್ನು ಕೇಳಿ ಜನರು ಹೆಚ್ಚಾಗಿ ಮನಕರಗಿದರು ಮತ್ತು ಜನರ ಮೇಲೆ ಯೋಹಾನನು ಬಹಳ ಪ್ರಭಾವ ಬೀರಿದನು (Josephus *Antiquities* 18.5.2). [3]Robert H. Mounce, *Matthew*, New International Biblical Commentary (Peabody, Mass.: Hendrickson Publishers, 1991), 21. [4]Jack P. Lewis, *The Gospel According to Matthew*, Part 1, The Living Word Commentary (Austin, Tex.: Sweet Publishing Co., 1976), 54. [5]Gerhard Kittel, *"erēmos,"* in *Theological Dictionary of the New Testament*, ed. Gerhard Kittel, trans. Geoffrey W. Bromiley (Grand Rapids, Mich.: Wm. B. Eerdmans Publishing Co., 1964), 2:658-59. [6]John A. Broadus, *Commentary on Matthew* (Louisville: N.p.: 1886; reprint, Grand Rapids, Mich.: Kregel Publications, 1990), 34. [7]Robert H. Gundry, *Matthew: A Commentary on His Literary and Theological Art* (Grand Rapids, Mich.: Wm. B. Eerdmans Publishing Co., 1982), 43. [8]"ದೇವರ ರಾಜ್ಯ" ಎನ್ನುವ ಭಾಗವು ಮತ್ತಾಯನು ಕೇವಲ ನಾಲ್ಕು ಸಾರಿ ಉಪಯೋಗಿಸಿದ್ದಾನೆ (12:28; 19:24; 21:31, 43). [9]Lewis, 55; Mounce, 23. [10]Paul T. Butler, *Isaiah*, vol. 3, Bible Study Textbook Series (Joplin, Mo.: College Press, 1978), 10.

[11]Lewis, 56; ನೋಡಿ *Manual of Discipline* 8.13-16; 9.19. [12]ನೋಡಿ Josephus *Wars* 1.24.3. [13]Gundry, 45. [14]Leon Morris, *The Gospel According to Matthew*, Pillar Commentary (Grand Rapids, Mich.: Wm. B. Eerdmans Publishing Co., 1992), 55. [15]H. Leo Boles, *A Commentary on the Gospel According to Matthew* (Nashville: Gospel Advocate Co., 1936), 71. [16]Josephus *Antiquities* 18.5.2. [17]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick W. Danker (Chicago: University of Chicago Press, 2000), 164. [18]David S. Dockery, "Baptism," in *Dictionary of Jesus and the Gospels*, ed. Joel B. Green and Scot

McKnight (Downers Grove, Ill.: InterVarsity Press, 1992), 55. [19]Mishnah *Mikwaoth*. [20]Dockery, 56-57; ನೋಡಿ *Manual of Discipline* 3.4-9; 6.14-23. Qumran ಪಂಗಡವು Essene ಪಕ್ಷಕ್ಕೆ ಸೇರಿತ್ತು ಎಂದು ನಂಬಲಾಗಿದೆ ಜೋಸೆಫಸ್ ಹೇಳಿದ ಹಾಗೆಯೇ Essenes ಪಕ್ಷದವರು ತಮ್ಮ "ದೇಹಗಳನ್ನು ತಣ್ಣಿರಿನಲ್ಲಿ ಸ್ನಾನ ಮಾಡುತ್ತಿದ್ದರು" ಇದು ದಿನಾಲು ಶುದ್ದೀಕರಿಸುವ ಭಾಗವಾಗಿತ್ತು (Josephus *Wars* 2.8.5, 9).

[21]G. R. Beasley-Murray, *Baptism in the New Testament* (N.p.: W. T. Whitley Lectureship, 1962; reprint, Grand Rapids, Mich.: Wm. B. Eerdmans Publishing Co., 1994), 18-31; ನೋಡಿ Epictetus *Dissertations* 2.9.9-21; Mishnah *Pesahim* 8.8; Talmud *Yebamoth* 46a; *Pesahim* 91b-92. [22]J. W. McGarvey, *The New Testament Commentary*, vol. 1, *Matthew and Mark* (N.p., 1875; reprint, Delight, Ark.: Gospel Light Publishing Co., n.d.), 34. [23]Lewis, 58. [24]1 Maccabees 2:42; 7:13; 2 Maccabees 14:6. [25]Mishnah *Aboth* 3.14. [26]Josephus *Antiquities* 17.2.4. [27]Josephus *Wars* 2.8.14. [28]Josephus *Antiquities* 18.1.4. [29]Mounce, 23. [30]*Genesis Rabbah* 48.8; ನೋಡಿ Justin Martyr *Dialogue with Trypho* 140.

[31]Donald A. Hagner, *Matthew 1-13*, Word Biblical Commentary, vol. 33A (Dallas: Word Books, 1993), 50. [32]Morris, 59. [33]Lewis, 62. [34]Hagner, 51. [35]Gundry, 48. [36]ನೋಡಿ ಕೀರ್ತನೆ 118:26; ಮಲಾಕಿಯ 3:1; ಮತ್ತಾಯ 11:3; 21:9; 23:39; ಯೋಹಾನ 4:25. [37]Morris, 61, ಹೇಳಿರುವದನ್ನುTalmud *Ketuboth* 96a; ನೋಡಿ *Baba Bathra* 53b. [38]ಮತ್ತಾಯ 3:1-17 Jack Wilhelm, ರವರಿಂದ ಈ ವ್ಯಕ್ತಿ ಪರಿಚಯವನ್ನು ಅದರ ಅಂಶಗಳನ್ನು ಅಭಿವೃದ್ಧಿ ಮಾಡಲಾಗಿದೆ. "John the Baptist's Resumé as a Preacher," *RSVP Newsletter* 153-8-83-36 (1983). Jack Wilhelmರವರು, P.O. Box 2222, Florence, AL 35630ರಲ್ಲಿ ಅನುವಾದಿಸಿದ್ದಾರೆ. [39]Jack Wilhelm, "The Baptism of Jesus," *RSVP Newsletter* 172-6-84-41 (1984). [40]ಈ ಅಧ್ಯಾಯವು ವಿಶೇಷವಾಗಿ ಬೋಧಕರಿಗೆ ಅನ್ವಹಿಸುತ್ತದೆ, ಸಾಮಾನ್ಯವಾಗಿ ಎಲ್ಲಾ ಕ್ರೈಸ್ತರು ಇದನ್ನು ಅಳವಡಿಸಿಕೊಳ್ಳಬಹುದು.